ಸಂಪುಟ : 10 ಸಂಚಿಕೆ: 57 ಪುಟ : 4+2 ಬೆಲೆ: 3.00 ಮಂಗಳವಾರ ಏಪ್ರಿಲ್ 1 2025 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 10 Issue : 57 Pages : 4+2 Price : 3.00 Tuesday April 1 2025 Gadag RNINo:KARKAN/2015/63412 E-mail: vijayasakshidaily@gmail.com Post Regn.No: GDG/72/2023-25

## ಅಡವೀಂದ್ರ ಮಠದಲ್ಲಿ ಶಿವಾನುಭವ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಅಡವೀಂದ್ರ ಸ್ವಾಮಿ ಮಠದಲ್ಲಿ ಎಪ್ರಿಲ್ 1ರಂದು ಸಂಜೆ 6–30 ಗಂಟೆಗೆ 334ನೇ ಮಾಸಿಕ ಶಿವಾನುಭವ, ಜ. ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮ ನೆರವೇರಲಿದೆ.

ಗದುಗಿನ ರೇಣುಕಾಚಾರ್ಯ ಮಂದಿರದ ಪೂಜ್ಯ ರೇಣುಕ ದೇವರು ಸಾನ್ನಿಧ್ಯ ವಹಿಸುವರು. ಸಮ್ಮುಖವನ್ನು ಶ್ರೀಮಠದ ಧರ್ಮದರ್ಶಿ ಪೂಜ್ಯ ಶ್ರೀ ಮಹೇಶ್ವರ ಸ್ವಾಮಿಗಳು ವಹಿಸುವರು. ವೀರೇಶ ಕೂಗು ಉಪನ್ಯಾಸ ನೀಡುವರು.

ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ರಾಜ್ಯ ಪ್ರಶಸ್ತಿ ಪಡೆದ ಮನಸ್ವಿ ಹಾಗರಗಿ ಅವರಿಗೆ ಸನ್ಮಾನ, ನಿತ್ಯಂ ಯೋಗ ಕೇಂದ್ರದ ಮಹಿಳೆಯರಿಂದ ದೀಪ ನೃತ್ಯ ನೆರವೇರಲಿದ್ದು, ಪ್ರಸಾದ ಸೇವೆಯನ್ನು ಡಾ. ಎಂ.ವ್ಹಿ. ಐಹೊಳ್ಳಿ, ಸೋಮಶೇಖರ ಅಣ್ಣಿಗೇರಿ, ಪ್ರಕಾಶ ಬಂಡಿ ವಹಿಸಿಕೊಂಡಿದ್ದು, ಶಿವಾನುಭವ ಸಮಿತಿಯ ಪ್ರಧಾನ ಕಾರ್ಯದರ್ಶಿ ಬಿ.ಬಿ. ತೋಟಗೇರ ಸರ್ವರಿಗೂ ಸ್ವಾಗತ ಕೋರಿದ್ದಾರೆ.

## ಪ್ರಧಾನಿಗೆ ವಯಸ್ಸಾಯ್ತು, ನಿವೃತ್ತಿ ಪಡೆಯಲು ಮೋದಿ ಬಯಸಿದ್ದಾರೆ: ಸಂಜಯ್ ರಾವತ್!



■ ವಿಜಯಸಾಕ್ಷಿ ಸುದ್ದಿ, ನವದೆಹಲಿ

ಆರ್‌ಎಸ್‌ಎಸ್ ಕಚೇರಿಯಲ್ಲಿ ಮೋದಿ ನಿವೃತ್ತಿ ಘೋಷಣೆ ಬಗ್ಗೆ ಮಾತನಾಡಿದ್ದಾರೆ ಎಂದು ಶಿವಸೇನೆ ನಾಯಕ ಸಂಜಯ್ ರಾವತ್ ಹೇಳಿದ್ದಾರೆ.

ಈ ಸಂಬಂಧ ಮಾತನಾಡಿದ ಅವರು, ಪ್ರಧಾನಿ ಮೋದಿಗೆ ಸೆಪ್ಟೆಂಬರ್ 17ಕ್ಕೆ 75 ವರ್ಷ ತುಂಬಲಿದೆ. ಅವರ ಪಕ್ಷದ ನಿಯಮದಂತೆ ನಿವೃತ್ತರಾಗಲು ಸಿದ್ಧತೆ ನಡೆಸಿದ್ದಾರೆ. ಹೀಗಾಗಿ ತಮ್ಮ ನಿವೃತ್ತಿ ಅರ್ಜಿಯನ್ನು ಆರ್‌ಎಸ್‌ಎಸ್ ಕಚೇರಿಯಲ್ಲಿ ಸಲ್ಲಿಸಿರಬಹುದು. ಅಲ್ಲಿ ಗೌಪ್ಯವಾಗಿ ಚರ್ಚೆಯೂ ನಡೆದಿದೆ. ಅಲ್ಲದೇ ಸಂಘ ಪರಿವಾರವೂ ದೇಶದ ನಾಯಕತ್ವದಲ್ಲಿ ಬದಲಾವಣೆ ಬಯಸಿದೆ. ಪ್ರಧಾನಿ ಮೋದಿ ಕಾಲ ಮುಗಿದಿದೆ. ಅವರೂ ಕೂಡ ಬದಲಾವಣೆ ಬಯಸುತ್ತಾರೆ ಎಂದು ಸಂಜಯ್ ರಾವತ್ ಹೇಳಿದ್ದಾರೆ.

ಇನ್ನೂ ಪ್ರಧಾನಿಯಾದ ಬಳಿಕ ಮೊದಲ ಬಾರಿಗೆ ನರೇಂದ್ರ ಮೋದಿ ಭಾನುವಾರ ನಾಗ್ಪುರದ ಆರ್‌ಎಸ್‌ಎಸ್ ಕಚೇರಿಗೆ ಭೇಟಿ ನೀಡಿದ್ದರು. ಈ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿದೆ.

### ಪೋಕ್ಸೋ ಸರಿಯಾಗಿ ತನಿಖೆಯಾದ್ರೆ ಯಡಿಯೂರಪ್ಪ ಜೈಲಿಗೆ ಹೋಗ್ತಾನೆ: ಯತ್ನಾಳ್ ವಾಗ್ದಾಳಿ

■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಪೋಕ್ಸೋ ಸರಿಯಾಗಿ ತನಿಖೆಯಾದ್ರೆ ಯಡಿಯೂರಪ್ಪ ಜೈಲಿಗೆ ಹೋಗ್ತಾನೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಮತ್ತೆ ಕಿಡಿಕಾರಿದ್ದಾರೆ. ಕೊಪ್ಪಳದಲ್ಲಿ ಮಾತನಾಡಿದ ಅವರು, ಯಡಿಯೂರಪ್ಪ ಮಾತು ಕೇಳಿ ಹೈಕಮಾಂಡ್ ಉಚ್ಚಾಟನೆ ಮಾಡಿದ್ದಾರೆ.

ಬಿಜೆಪಿ ಹಿಂದುಗಳ ಪರವಾಗಿಲ್ಲ, ಪೋಕ್ಸೊದಲ್ಲಿ ಸರಿಯಾದ ತನಿಖೆಯಾದರೆ ಯಡಿಯೂರಪ್ಪ ಜೈಲಿಗೆ ಹೋಗುತ್ತಾನೆ.

### * ಪೊಲೀಸರ ಮೇಲೆಯೇ ದಾಳಿ ನಡೆಸಿ ತಪ್ಪಿಸಿಕೊಳ್ಳಲು ಯತ್ನಿಸಿದ ದರೋಡೆ ಗ್ಯಾಂಗ್ । ಆರೋಪಿಯ ಕಾಲಿಗೆ ಗುಂಡೇಟು

# 'ಜಯಸಿಂಹ'ನ ವಿರುದ್ಧ ಪೊಲೀಸ್ ವಿಜಯ

■ ವಿಜಯಸಾಕ್ಷಿ ಸುದ್ದಿ, ಗದಗ

ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ರಾಜ್ಯ ಮತ್ತು ಅಂತರರಾಜ್ಯ ಪೊಲೀಸರಿಗೆ ಬೇಕಾಗಿದ್ದ ಮೋಸ್ಟ್ ವಾಂಟೆಡ್ ದರೋಡೆಕೋರರ ತಂಡವನ್ನು ಬಂಧಿಸುವಲ್ಲಿ ಗದಗ ನಗರ ಪೊಲೀಸರು ಯಶಸ್ವಿಯಾಗಿದ್ದಾರೆ.

ಮಂಜುನಾಥ ಮೊಡಕೆರ್, ಹಾಗೂ ರಮೇಶ್ ಮೊಡಕೆರ್ ಹಾಗೂ ಜಯಸಿಂಹ ಮೊಡಕೆರ್ ಬಂಧಿತ ಆರೋಪಿಗಳಾಗಿದ್ದು, ಬಂಧನದ ವೇಳೆ ಪೊಲೀಸರು ಹಾಗೂ ಆರೋಪಿಗಳ ನಡುವೆ ಕದನವೇ ನಡೆದಿದೆ. ಬಂಧಿತರಲ್ಲಿ ನಟೋರಿಯಸ್ ಆರೋಪಿ ಜಯಸಿಂಹ ಪೊಲೀಸರ ಮೇಲೆ ಹಲ್ಲೆ ನಡೆಸಿ ತಪ್ಪಿಸಿಕೊಳ್ಳಲು ಯತ್ನಿಸಿದ್ದು, ಈ ವೇಳೆ ಆತ್ಮರಕ್ಷಣೆಗಾಗಿ ಪೊಲೀಸರು ಆರೋಪಿಯ ಕಾಲಿಗೆ ಎರಡು ಸುತ್ತು ಗುಂಡು ಹಾರಿಸಿದ್ದಾರೆ. ಮುಂಡರಗಿ ತಾಲೂಕಿನ ಡಂಬಳ ಹಾಗೂ ಡೋಣಿ ಗ್ರಾಮದ ನಡುವೆ ಈ ಘಟನೆ ನಡೆದಿದೆ.

ಹಲವು ಅಪರಾಧಿ ಕೃತ್ಯಗಳಲ್ಲಿ ಭಾಗಿಯಾಗಿದ್ದ ಆರೋಪಿಗಳು ತಮ್ಮ ಜಾಡು ತಿಳಿಯದಂತೆ ಮೊಬೈಲ್ ಸಂಪರ್ಕ ಬಿಟ್ಟು ಇನ್ಸ್ಟಾಗ್ರಾಂ ಮೂಲಕ ಸಂಪರ್ಕ ಹೊಂದಿದ್ದರು. ಅಂತಿಮವಾಗಿ ಖಚಿತ ಮಾಹಿತಿ



ಪಡೆದ ಗದಗ ಪೊಲೀಸರು, ದರೋಡೆಕೋರರ ತಂಡವನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ, ಬಂಧನದ ನಂತರ ಲಕ್ಷ್ಮೇಶ್ವರ ಪೊಲೀಸ್ ಠಾಣೆಗೆ ಆರೋಪಿಗಳನ್ನು ಕರೆತರುವ ಸಂದರ್ಭದಲ್ಲಿ ಆರೋಪಿ ಜಯಸಿಂಹ ತನ್ನ ಕೈಗೆ ತೊಡಿಸಿದ್ದ ಬೇಡಿಯಿಂದಲೇ ಪೊಲೀಸ್ ಸಿಬ್ಬಂದಿ ವೀರೇಶ್ ಬಿಸ್ನಳ್ಳಿ ಮೇಲೆ ಹಲ್ಲೆಗೆ ಯತ್ನಿಸಿದ್ದಾನೆ. ಈ ವೇಳೆ ಸಿಪಿಐ ಮಂಜುನಾಥ ಕುಸುಗಲ್ ಅವರು ಆರೋಪಿ ಕಾಲಿಗೆ ಗುಂಡು ಹಾರಿಸಿ, ಸೆರೆಹಿಡಿದಿದ್ದಾರೆ.

> ಆರೋಪಿ ಜಯಸಿಂಹನ ಮೇಲೆ ದರೋಡೆ, ಮನೆ ಕಳ್ಳತನ ಸೇರಿದಂತೆ ಹಲವು ಪ್ರಕರಣಗಳಿವೆ. ಬಂಧಿತ ದರೋಡೆ ಗ್ಯಾಂಗ್‌ಗಾಗಿ ರಾಜ್ಯ ಸೇರಿ ಅಂತರರಾಜ್ಯ ಪೊಲೀಸರು ಕೂಡ ಸಾಕಷ್ಟು ಹುಡುಕಾಟ ನಡೆಸಿದ್ದರು. ಆರೋಪಿಗಳ ಇರುವಿಕೆಯ ಖಚಿತ ಮಾಹಿತಿ ಪಡೆದು ವಿಜಯನಗರ ಜಿಲ್ಲೆಯ ಬಳಿ ಗದಗ ಪೊಲೀಸರು ವಶಕ್ಕೆ ಪಡೆದಿದ್ದರು. ರಾಜ್ಯದ ಬೆಳಗಾವಿ, ವಿಜಯಪೂರ, ಬಳ್ಳಾರಿ, ಬೆಂಗಳೂರು ಸೇರಿದಂತೆ ಹಲವಡೆ ದರೋಡೆ ಹಾಗೂ ಕಳ್ಳತನ ಪ್ರಕಣಗಳಲ್ಲಿ ಈ ಗ್ಯಾಂಗ್ ವಿರುದ್ಧ ಪ್ರಕರಣಗಳು ದಾಖಲಾಗಿವೆ.

ಮುಂಡರಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ಜರುಗಿದ್ದು, ಗಾಯಾಳುಗಳನ್ನು ಚಿಕಿತ್ಸೆಗಾಗಿ ಗದುಗಿನ ಜಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಕೂಡಲೇ ಆಸ್ಪತ್ರೆಗೆ ಭೇಟಿ ನೀಡಿದ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಗಾಯಾಳು ಪೊಲೀಸ್ ಸಿಬ್ಬಂದಿಗಳ ಆರೋಗ್ಯ ವಿಚಾರಿಸಿ, ಘಟನೆಯ ಸಂಪೂರ್ಣ ಮಾಹಿತಿ ಪಡೆದಿದ್ದಾರೆ.

### ಸಮಾನತೆಯ ಮಂದಿರ ದೇಶಕ್ಕೆ ಮಾದರಿಯಾಗಲಿ: ಅನಿಲ ಮೆಣಸಿನಕಾಯಿ

# 14ರಿಂದ 'ಸಮಾನತೆ ರಥಯಾತ್ರೆ'

■ ವಿಜಯಸಾಕ್ಷಿ ಸುದ್ದಿ, ಗದಗ

ಇತ್ತೀಚಿನ ದಿನಮಾನಗಳಲ್ಲಿ ಎಲ್ಲೆಡೆ ಅಸಮಾನತೆ ತಾಂಡವವಾಡುತ್ತಿದ್ದು, ಸಂವಿಧಾನಕ್ಕೆ ಬೆಲೆ ಇಲ್ಲದಂತಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲರಲ್ಲಿಯೂ ಭ್ರಾತೃತ್ವ, ಸಮಾನತೆ ಬೆಸೆಯುವ ಉದ್ದೇಶದಿಂದ ಎಪ್ರಿಲ್ 14ರಿಂದ ಬಸವ ಜಯಂತಿಯವರೆಗೂ 15 ದಿನಗಳ ಕಾಲ ಜಿಲ್ಲೆಯಾದ್ಯಂತ ಸಮಾನತೆಯ ರಥಯಾತ್ರೆ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಈ ವೇಳೆ ಬುದ್ಧ, ಬಸವ, ಮಹರ್ಷಿ ವಾಲ್ಮೀಕಿ, ಅಂಬೇಡ್ಕರ್, ಶಿಶುನಾಳ ಶರೀಫ, ಪ್ರಭು ಶ್ರೀರಾಮಚಂದ್ರ ಸೇರಿದಂತೆ ಹಲವು ದಾರ್ಶನಿಕರ ಭಾವಚಿತ್ರ ಮೆರವಣಿಗೆ ನಡೆಯಲಿದೆ ಎಂದು ಯುವ ಮುಖಂಡ ಅನಿಲ ಮೆಣಸಿನಕಾಯಿ ಹೇಳಿದರು.

ನಗರದ ತಮ್ಮ ನಿವಾಸದ ಆವರಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, 'ಸಮಾನತೆಯ ನಡಿಗೆ' ಎಂಬ ಕಾರ್ಯಕ್ರಮವನ್ನು 2024ರಲ್ಲಿ ಹಮ್ಮಿಕೊಳ್ಳಲಾಗಿತ್ತು. 'ಸಮಾನತೆ ಮಂದಿರ' ಸ್ಥಾಪಿಸುವ ಗುರಿಯನ್ನೂ ಹೊಂದಲಾಗಿದ್ದು, ತಾಲೂಕಿನ ಕುರ್ತಕೋಟಿ ಗ್ರಾಮದಲ್ಲಿ ಲಿಂಗಾಯತ ಸಮುದಾಯದವರು ಮಂದಿರ ನಿರ್ಮಿಸಲು 2 ಎಕರೆ ಜಾಗವನ್ನು ದಾನವಾಗಿ ನೀಡಿದ್ದಾರೆ. ಮುಂದಿನ ವರ್ಷ ಭೂಮಿಪೂಜೆ ನಡೆಸಿ, ಎರಡು ವರ್ಷಗಳಲ್ಲಿ ಮಂದಿರ ಪೂರ್ಣಗೊಳಿಸುವ ಯೋಜನೆ ಹಾಕಿಕೊಳ್ಳಲಾಗಿದೆ



ಎಂದು ತಿಳಿಸಿದರು.

ರಾಜಕಾರಣದ ಉದ್ದೇಶ ಇಟ್ಟುಕೊಂಡು ಮಂದಿರ ನಿರ್ಮಿಸುತ್ತಿಲ್ಲ. ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಒಂದು ಜಾತಿ, ಸಮುದಾಯಕ್ಕೆ ಸಿಮಿತರಾಗಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಅವರನ್ನು ಕೇವಲ ಒಂದು ಜಾತಿ, ಒಂದು ಸಮುದಾಯಕ್ಕೆ ಮಾತ್ರ ಸೀಮಿತಗೊಳಿಸಲಾಗುತ್ತಿದೆ. ಜನರಲ್ಲಿನ ಈ ಮನೋಭಾವ ಹೋಗಬೇಕು. ಸಮಾನತೆಗಾಗಿ ಶ್ರಮಿಸಿದ ಅವರು ಅಖಂಡ ಭಾರತೀಯರ ಆರಾಧ್ಯ ದೈವ ಆಗಬೇಕು ಎನ್ನುವ ಉದ್ದೇಶದಿಂದ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಸಂದೇಶ ಸಾರುವ ಗುರಿಯೊಂದಿಗೆ ಜ್ಞಾನಕ್ಕಾಗಿ ಮಂದಿರ ನಿರ್ಮಿಸುತ್ತಿದ್ದೇವೆ ಎಂದು ತಿಳಿಸಿದರು.

ಎಪ್ರಿಲ್ 15ರಂದು ಬುತ್ತಿಯ ಕಾರ್ಯಕ್ರಮ ಆಯೋಜನೆ ಮಾಡಿದ್ದು, ಕೋಟಮುಚಗಿ, ಕಲ್ಲೂರ, ಹುಲಕೋಟಿ, ಗದಗ, ಹುಬ್ಬಳ್ಳಿ ಸೇರಿದಂತೆ ಹಲವು ಭಾಗಗಳಿಂದ ಸಾವಿರಾರು ಬುತ್ತಿಗಳನ್ನು ಭಕ್ತರು ತರಲಿದ್ದಾರೆ. ಸಮಾನತೆ ಸಾರುವುದೇ ಈ ಕಾರ್ಯಕ್ರಮ ಮೂಲ ಉದ್ದೇಶವಾಗಿದ್ದು, ಕಾರ್ಯಕ್ರಮದಲ್ಲಿ ರಾಜಕಾರಣಿಗಳಿಗೆ ಪ್ರವೇಶವಿಲ್ಲ.

> ಸಮಾನತೆ ಮಂದಿರವನ್ನು ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ನಿರ್ಮಿಸಲು ನಮ್ಮ ತಂಡ ಸಜ್ಜಾಗಿದೆ. ದೇಶಕ್ಕೆ ಸಮಾನತೆಯ ಮಂದಿರ ಮಾದರಿ ಆಗಬೇಕು ಎನ್ನುವ ಗುರಿ ಹೊಂದಲಾಗಿದ್ದು, ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ. ಪಾಟೀಲ್ ಅವರು ಸಮಾನತೆ ಮಂದಿರ ನಿರ್ಮಾಣ ಮಾಡಲು ನಮಗೆ ಶಕ್ತಿ ನೀಡಲಿ. ಮಂದಿರ ನಿರ್ಮಿಸಲು ಅವರು ನಮ್ಮ ಜೊತೆ ಕೈಜೋಡಿಸಿದರೆ ಸ್ವಾಗತಿಸುತ್ತೇವೆ.
>
> – ಅನಿಲ ಮೆಣಸಿನಕಾಯಿ.
> ಯುವ ಮುಖಂಡ, ಗದಗ.

ರೈತರು, ಶ್ರಮಿಕರು ನಮ್ಮ ಕಾರ್ಯಕ್ರಮದ ಪ್ರಮುಖ ಭಾಗವಾಗಿರುತ್ತಾರೆ. ರಥಯಾತ್ರೆ ನಂತರ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರ ಜೊತೆ–ಗೂಡಿ ಸಮಾನತೆಯಿಂದ ನೆಲದ ಮೇಲೆ ಕುಳಿತು ಮುನ್ಸಿಪಲ್ ಮೈದಾನದಲ್ಲಿ ಬುತ್ತಿಯ ಭೋಜನ ಸೇವಿಸಲಾಗುವುದು ಎಂದವರು ತಿಳಿಸಿದರು.

ಈ ವೇಳೆ ವಾಲ್ಮೀಕಿ ಸೇವಾ ಸಮಿತಿ ಅಧ್ಯಕ್ಷ ಆನಂದ ಬೆಳದಡಿ, ಹೋರಾಟಗಾರ ರವಿಕಾಂತ್ ಅಂಗಡಿ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ರುದ್ರಣ್ಣ ಗುಳಗುಳಿ, ಉಡಚಪ್ಪ ಹಳ್ಳಿಕೇರಿ, ಮುತ್ತಣ್ಣ, ಮುತ್ತು ಮುಶಿಗೇರಿ, ಫಕ್ಕಿರೇಶ ಮುಳಗುಂದ, ವಿಜಯಲಕ್ಷ್ಮೀ ಮಾನ್ವಿ, ಉಮೇಶ ಹಡಪದ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ರಂಜಾನ್ ಶುಭಾಶಯ ಕೋರಿದ ಸಚಿವ ಎಚ್.ಕೆ. ಪಾಟೀಲ



■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಗದಗ ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ಆಯೋಜಿಸಿದ್ದ ಇಫ್ತಾರ್ ಕೂಟದಲ್ಲಿ ಸಚಿವ ಎಚ್.ಕೆ. ಪಾಟೀಲ ಮುಸ್ಲಿಂ ಬಾಂಧವರಿಗೆ ಪವಿತ್ರ ರಂಜಾನ್ ಹಬ್ಬದ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಮುಳಗುಂದ ಪಟ್ಟಣದ ಪರವಾಗಿ ಅಂಜುಮನ್ ಸಂಸ್ಥೆಯ ಸದಸ್ಯರು, ಅಧ್ಯಕ್ಷರಾದ ತಾಜುದ್ದೀನ ಕಿಂಡ್ರಿ ಸಚಿವರಿಗೆ ಗೌರವ ಸನ್ಮಾನ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಎ.ಡಿ. ಮುಜಾವರ, ಹೈದರ ಖವಾಸ, ಮುನ್ನಾ ಡಾಲಾಯತ, ದಾವೂದ ಜಮಾಲ್, ದಾವಲಸಾಬ ಲಕ್ಷ್ಮೇಶ್ವರ, ಮಾಬುಲಿ ದುರ್ಗಿಗುಡಿ, ಖಲಂದರ ಗಾಡಿ, ಹುಸೇನ ಅಕ್ಕಿ, ಪ್ರಕಾಶ ನಡಗೇರಿ, ಇಸ್ಮಾಯಿಲ್ ಜಮಾಲಸಾಬನವರ, ಗೌಸ ಡಾಲಾಯತ, ಖಲೀಫನವರ, ಅಶ್ಫಾಕ ನದ್ದೀಮುಲ್ಲಾ ಮುಂತಾದವರು ಉಪಸ್ಥಿತರಿದ್ದರು.

### ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದ ಮುಸ್ಲಿಂ ಬಾಂಧವರು

# ರೋಜಾ ಆಚರಣೆಯಿಂದ ಸಂಕಷ್ಟಗಳು ದೂರ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಪಟ್ಟಣ ಸೇರಿದಂತೆ ಹೋಬಳಿಯಾದ್ಯಂತ ಸೋಮವಾರ ಶ್ರದ್ಧಾಭಕ್ತಿಯಿಂದ ಮುಸ್ಲಿಂ ಬಾಂಧವರು ಪವಿತ್ರ ಹಬ್ಬ ಈದ್ ಉಲ್ ಫಿತ್ರ್ (ರಂಜಾನ್ ಹಬ್ಬ)ವನ್ನು ಆಚರಣೆ ಮಾಡಿದರು.

ನರೇಗಲ್ಲ, ಅಬ್ಬಿಗೇರಿ, ಯರೇಬೇಲೇರಿ, ಕುರುಡಗಿ, ಡ.ಸ. ಹಡಗಲಿ, ನಿಡಗುಂದಿ, ಜಕ್ಕಲಿ, ಮಾರನಬಸರಿ, ಗುಜಮಾಗಡಿ, ಹೊಸಳ್ಳಿ, ಹಾಲಕೇರಿ, ಕೋಚಲಾಪೂರ, ಮೊದಲಾದ ಕಡೆಗಳಲ್ಲಿ ಹಬ್ಬದ ಖುಷಿ ಮನೆ ಮಾಡಿತ್ತು. ಮುಸ್ಲಿಂ ಬಾಂಧವರು ಹಿಂದೂ ಬಾಂಧವರನ್ನು ತಮ್ಮ ಮನೆಗೆ ಕರೆದು ರಂಜಾನ್ ಹಬ್ಬದ ವಿಶೇಷ ಶೀರ್‌ಕೂರ್ಮಾ (ಸುರ್‌ಕುಂಬಾ) ಕೊಟ್ಟು, ಊಟ ಮಾಡಿಸಿ, ಭ್ರಾತೃತ್ವ ಮೆರೆದರು.

ನರೇಗಲ್ಲ ಪಟ್ಟಣದ ಗದಗ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ



ಮುಸ್ಲಿಂ ಬಾಂಧವರು ಎಲ್ಲರೂ ಸೇರಿಕೊಂಡು ಏಕಕಾಲಕ್ಕೆ ಸಾಮೂಹಿಕ ಪ್ರಾರ್ಥನೆ ಮಾಡಿದರು.

ಮಸೀದಿ, ಈದ್ಗಾಗಳಲ್ಲಿ ಪ್ರಾರ್ಥನೆ ಸಲ್ಲಿಸಿದ ಬಳಿಕ ಮುಸ್ಲಿಂ ಬಾಂಧವರು ತಮ್ಮ ಶಕ್ತಿಗನುಸಾರವಾಗಿ ದಾನ–ಧರ್ಮ ಮಾಡಿದರು. ಹಿರಿಯರು ಮಕ್ಕಳ ಕೈಗೂ ಹಣ ಕೊಟ್ಟು, ಚಿಕ್ಕಮಕ್ಕಳು ಸಹ ದಾನ ಮಾಡುವಂತೆ ಪ್ರೇರೇಪಿಸಿದ್ದು ವಿಶೇಷವಾಗಿತ್ತು.

> ದರಗಾದ ಮಂಜೂರ ಹುಸೇನ ಶ್ಯಾವಲಿ ಶರಣರು ಆಶೀರ್ವಚನ ನೀಡಿ, ಪವಿತ್ರ ರಂಜಾನ್ ಒಂದು ತಿಂಗಳ ಉಪವಾಸ ಮಾಡುವ ಮೂಲಕ ದೇವರ ಜೊತೆ ನಮ್ಮ ಸಂಬಂಧ ಮತ್ತಷ್ಟು ಗಟ್ಟಿಯಾಗುತ್ತೆ. ಈ ತಿಂಗಳಲ್ಲಿ ಉಪವಾಸ ಮಾಡಿದರೆ ಸಂಕಷ್ಟಗಳು ಕಡಿಮೆಯಾಗುತ್ತವೆ. ಈ ತಿಂಗಳಲ್ಲಿ ಬಡವರಿಗೆ ದಾನ–ಧರ್ಮ ಮಾಡುವುದು ಹಾಗೂ ಹಸಿದವರಿಗೆ ಆಹಾರ ನೀಡುವಂತಹ ಪುಣ್ಯ ಕಾರ್ಯಗಳನ್ನು ಮಾಡಲಾಗುತ್ತದೆ ಎಂದರು.

ಸಾಮೂಹಿಕ ಪ್ರಾರ್ಥನೆಯಲ್ಲಿ ಎ.ಆಯ್. ರಾಹುತ್, ಎ.ಎ. ನವಲಗುಂದ, ಫಾರೂಕ್ ಹಳ್ಳಿಕೇರಿ, ಗುಲಾಬ ಮಕಾನದಾರ, ಶಫಿ ಸವಡಿ, ಹಸನಸಾಬ ಕಲೆಗಾರ, ಖಾದೀರ ನಶೇಖಾನ, ಅಲ್ಲಾಭಕ್ಷಿ ನದಾಫ್, ಭಾಷಾ ಹೂಲಗೇರಿ, ಮಾಬುಸಾಬ ಮುದಗಲ್, ಮೈನುದ್ದೀನಸಾಬ ಮುಗಳಿ, ನೂರಹ್ಮದ ರೋಣದ, ನಜೀರ ಹದ್ಲಿ, ಮಲಿಕಸಾಬ ರೋಣದ, ಸಮೀರ ಬಳಬಟ್ಟಿ, ರಫೀಕ ನದಾಫ್, ಲಾಡಸಾಬ ಹದ್ಲಿ, ಸಿಕಂದರ ಕುದರಿ, ದಾವುದಲಿ ಕುದರಿ, ಹಟೇಲಸಾಬ ಲತೀಫಸಾಬನ್ನವರ, ಖಾದೀರಸಾಬ್ ಬನ್ನಿಗೋಳ, ಪೀರಸಾಬ ರಾಹುತ್, ಅಬ್ದುಲ್‌ಗನಿ ಕುದರಿ, ಗಫಾರ ಬಾಲೇಸಾಬನವರ, ಅಬ್ದುಲ್‌ಸಾಬ ರವಡೂರ, ಪೀರಸಾಬ ನದಾಫ್, ರೈಮಾನಸಾಬ ತಹಸೀಲ್ದಾರ, ಹಸನಸಾಬ ಕೊಪ್ಪಳ, ಮೊಹ್ಮದ್ ನಶೇಖಾನ, ಅಬ್ದುಲ್‌ರಹಿಮಾನ ನವಲಗುಂದ, ಕೊಪ್ಪದ, ಮಹಬೂಬ ಹೊಸಮನಿ, ರೈಮಾನಸಾಬ ಕುಂದಗೋಳ, ಇಮಾಮಹುಸೇನ ಹಜರತ್, ಕಾಶೀಂಸಾಬ ಹೊಸಮನಿ, ಹಸನ್ ಕಲೇಗಾರ, ಎಂ.ಅಯ್. ರಾಹುತ್, ಅಲ್ಲಾಭಕ್ಷಿ ನದಾಫ್ ಮುಂತಾದವರು ಪಾಲ್ಗೊಂಡಿದ್ದರು. ನರೇಗಲ್ಲ ಪೊಲೀಸ್ ಠಾಣಾ ಸಿಬ್ಬಂದಿಗಳು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.

ಲೋನ್ ಕೊಡದ ಬ್ಯಾಂಕ್‌ನ್ನೇ ಲೂಟಿ ಮಾಡಿದ್ದ ಗ್ಯಾಂಗ್

## ಸಿನಿಮಾ, ಧಾರಾವಾಹಿ ನೋಡಿ ಕಳ್ಳತನ ಮಾಡಿದ್ದ ಖದೀಮರ ಬಂಧನ!




■ವಿಜಯಸಾಕ್ಷಿ ಸುದ್ದಿ, ದಾವಣಗೆರೆ

ಕಳೆದ ವರ್ಷ ನಡೆದಿದ್ದ ಜಿಲ್ಲೆಯ ನ್ಯಾಮತಿ ಬ್ಯಾಂಕ್ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ದಾವಣಗೆರೆ ಪೊಲೀಸರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ವಿಜಯಕುಮಾರ್(30), ಅಜಯ್ ಕುಮಾರ್(28,) ಅಭಿಷೇಕ(23) ಚಂದ್ರು (23)ಮಂಜುನಾಥ್( 32) ಪರಮಾನಂದ (30) ಬಂಧಿತ ಆರೋಪಿಗಳಾಗಿದ್ದು, ಕಬ್ಬಿಣದ ಕಡಲೆಯಾಗಿದ್ದ ಪ್ರಕರಣವನ್ನ ಭೇದಿಸಿದ ರೋಚಕತೆಯನ್ನು ಐಜಿಪಿ ರವೀಕಾಂತೆಗೌಡ್ ಬಿಚ್ಚಿಟ್ಟಿದ್ದಾರೆ.

ದರೋಡೆ ಪ್ರಕರಣದ ಮಾಸ್ಟರ್ ಮೈಂಡ್ ವಿಜಯ್ ಕುಮಾರ್ ನ್ಯಾಮತಿಯಲ್ಲಿ ಬೇಕರಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದ. ಬ್ಯಾಂಕ್‌ನಲ್ಲಿ ಲೋನ್ ಪಡೆಯಲು ಎರಡು ಬಾರಿ ಅರ್ಜಿ ಹಾಕಿದ್ದ, ಸಿವಿಲ್ ಸ್ಕೋರ್ ಕಡಿಮೆ ಇದ್ದ ಹಿನ್ನೆಲೆಯಲ್ಲಿ ಅರ್ಜಿ ತಿರಸ್ಕಾರವಾಗಿತ್ತು. ಇದರಿಂದ ವಿಜಯಕುಮಾರ್ ರೋಸಿ ಹೋಗಿದ್ದ. ಇದೇ ಕಾರಣಕ್ಕೆ ಬ್ಯಾಂಕ್ ದರೋಡೆಗೆ ಹಲವಾರು ಸಿನಿಮಾ, ಧಾರಾವಾಹಿ, ಯುಟ್ಯೂಬ್, ಹಿಂದಿ ವೆಬ್ ಸೀರಿಸ್ ನೋಡಿ ದರೋಡೆಗೆ ಸಂಚು ರೂಪಿಸಿದ್ದನು.

ಆರೋಪಿಗಳು ಮೊಬೈಲ್, ವಾಹನ ಬಳಸದೇ, ಯಾವ ಸಾಕ್ಷಿಯನ್ನೂ ಬಿಡದೆ ದರೋಡೆ ಮಾಡಿದ್ದರು. ದರೋಡೆ ಮಾಡಿದ 17 ಕೆಜಿ ಚಿನ್ನವನ್ನು ತಮಿಳುನಾಡಿನ ಮಧುರೈನಲ್ಲಿರುವ ತೋಟದ ಮನೆಯ ಪಾಳು ಬಿದ್ದ ಬಾವಿಯಲ್ಲಿ ಲಾಕರ್‌ನಲ್ಲಿ ಇಟ್ಟಿದ್ದರು.

ದರೋಡೆಗೆ ಮೊದಲು, ದರೋಡೆಯ ನಂತರ ದರೋಡೆ-ಕೋರರು ಗಡಿ ಚೌಡಮ್ಮನ ಅಷ್ಟ ಧಿಗ್ಬಂಧನ ಪೂಜೆ ಮಾಡಿದ್ದರು. ಅಲ್ಲದೇ ದರೋಡೆಯ ಮಾಹಿತಿಯನ್ನು ಕುಟುಂಭಸ್ಥರ ಜೊತೆಯೂ ಹಂಚಿಕೊಂಡಿರಲಿಲ್ಲ ಎಂದು ಐಜಿಪಿ ರವೀಕಾಂತೆಗೌಡ್ ಹೇಳಿದ್ದಾರೆ.

ಸದ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಟೆಕ್ನಿಕಲ್ ಎವಿಡೆನ್ಸ್ ಮೂಲಕ ತಮಿಳುನಾಡಿನ ಮೂವರು, ನ್ಯಾಮತಿ ಮೂವರು ಸೇರಿ ಒಟ್ಟು ಆರು ಆರೋಪಿಗಳನ್ನು ಬಂಧಿಸಿದ್ದಾರೆ ಎಂದರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಾರಥೋತ್ಸವದಲ್ಲಿ ರಂಭಾಪುರಿ ಶ್ರೀಗಳು

# ಯುಗಾದಿ ಹಬ್ಬ ಜೀವನ ವಿಕಾಸಕ್ಕೆ ಸ್ಫೂರ್ತಿ

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಹಬ್ಬಗಳ ತವರೂರು ಭಾರತ. ಹಿಂದೂ ಸಂಸ್ಕೃತಿಯಲ್ಲಿ ಹಲವಾರು ಹಬ್ಬಗಳು ಬರುತ್ತವೆ. ಆ ಎಲ್ಲ ಹಬ್ಬಗಳಲ್ಲಿ ಯುಗಾದಿ ಮೊದಲ ಹಬ್ಬ. ವಸಂತ ಋತುವಿನಲ್ಲಿ ಪ್ರಕೃತಿಯಲ್ಲಿ ಹೊಸತನ ಕಾಣುತ್ತೇವೆ. ಮರ-ಗಿಡ, ಬಳ್ಳಿಗಳಲ್ಲಿ ಹೊಸ ಚಿಗುರು, ಕೋಗಿಲೆಯ ಸುಮಧುರ ಧ್ವನಿ ಮನುಷ್ಯನ ಚೈತನ್ಯಕ್ಕೆ ಕಾರಣವಾಗುತ್ತವೆ. ಜೀವ ಸಂಕುಲಕ್ಕೆ ಯುಗಾದಿ ಹೊಸ ವರುಷ ಸ್ಫೂರ್ತಿಯನ್ನು ತಂದು ಕೊಡುವುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಭಾನುವಾರ ತಾಲೂಕಿನ ತಿರುಮಲಕೊಪ್ಪ ಗ್ರಾಮ ವ್ಯಾಪ್ತಿಯ ಶ್ರೀ ಜಗದ್ಗುರು ರೇಣುಕ ಧರ್ಮ ನಿವಾಸದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಹಾಗೂ ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಾರಥೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಭಾರತೀಯ ಸಂಸ್ಕೃತಿಯಲ್ಲಿ ಬರುವ ಪ್ರತಿಯೊಂದು ಹಬ್ಬಗಳಿಗೆ ತನ್ನದೇ ಆದ ಇತಿಹಾಸ, ಹಿನ್ನೆಲೆ ಇರುತ್ತದೆ. ಕಳೆದು ಹೋದ ದಿನಗಳ ಆತ್ಮ ನಿರೀಕ್ಷಣೆ ಮಾಡಿ ಹೊಸ ವರುಷದಲ್ಲಿ ಮಾದರಿಯಾಗಿ ಹೆಜ್ಜೆಯನ್ನು ಇಡಬೇಕು ಎಂಬುದಕ್ಕೆ ಯುಗಾದಿ ಹೊಸ ವರುಷ ಚೈತನ್ಯ ನೀಡುತ್ತದೆ. ಕ್ರೋಧಿನಾಮ ಸಂವತ್ಸರ ತೆ-ರೆಗೆ ಸರಿದು ಇದೀಗ ವಿಶ್ವಾವಸುನಾಮ ಸಂವತ್ಸರದಲ್ಲಿ ಪಾದಾರ್ಪಣೆ ಮಾಡಿದ್ದೇವೆ. ಬೇವು-ಬೆಲ್ಲ ಕಷ್ಟ ಸುಖಗಳ ಸಂಕೇತವಾಗಿದೆ. ಯಾವಾಗಲೂ ಕಷ್ಟ-ಸುಖ ಎರಡನ್ನೂ



ಸಮಾನವಾಗಿ ಸ್ವೀಕರಿಸಿ ಬದುಕು ಸಾಗಿಸಬೇಕೆಂಬುದನ್ನು ಯುಗಾದಿಯಿಂದ ತಿಳಿಯಬಹುದಾದ ಸಂದೇಶವಾಗಿದೆ.

ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಕೃತ, ತ್ರೇತ, ದ್ವಾಪರ ಮತ್ತು ಕಲಿಯುಗಗಳಲ್ಲಿ ಅವತರಿಸಿ ಶಿವಜ್ಞಾನ ಸಂಪತ್ತನ್ನು ಬೋಧಿಸಿ ಉದ್ಧರಿಸಿದ್ದಾರೆ. ಜಾತಿ ಮತ ಪಂಥಗಳೆನ್ನದೆ ಸರ್ವರಿಗೂ ಒಳಿತನ್ನು ಬಯಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ನಿರಂತರ ಸಾಧನೆ ಮತ್ತು ಪ್ರಯತ್ನದಿಂದ ಮಾನವ ಪರಮಾತ್ಮನೆಡೆಗೆ ಸಾಗಲು ಸಾಧ್ಯವೆಂಬುದನ್ನು ತೋರಿದ ಪರಮಾಚಾರ್ಯರು. ಹೊಸ ವರುಷದ ಯುಗಾದಿ ದಿನದಂದು ಶ್ರೀ ಜಗದ್ಗುರು ಧರ್ಮ ನಿವಾಸದಲ್ಲಿ ಸಂಭ್ರಮದಿಂದ ಆಚರಿಸುತ್ತಿರುವುದು ತಮಗೆ ಸಂತಸ ತಂದಿದೆ ಎಂದರು.

ಅಧ್ಯಕ್ಷತೆ ವಹಿಸಿದ ಮುಕ್ತಿಮಂದಿರ ಕ್ಷೇತ್ರದ ವಿಮಲ ರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಸ್ವಾಮಿಗಳು ಯುಗಾದಿ ಹೊಸ ವರುಷ ಹಾಗೂ ಶ್ರೀ ಜಗದ್ಗುರು ಪಂಚಾಚಾರ್ಯ ಯುಗಮಾನೋತ್ಸವ ಔಚಿತ್ಯ ಕುರಿತು ಮಾತನಾಡಿದರು. ಸುಳ್ಳದ ಶಿವಸಿದ್ಧರಾಮೇಶ್ವರ ಶಿವಾಚಾರ್ಯರು, ಸೂಡಿ ಜುಕ್ತಿ ಹಿರೇಮಠದ ಡಾ. ಕೊಟ್ಟೂರು ಬಸವೇಶ್ವರ ಶಿವಾಚಾರ್ಯರು, ಮಳಲಿ ಸಂಸ್ಥಾನ ಮಠದ ಡಾ. ನಾಗಭೂಷಣ ಶಿವಾಚಾರ್ಯರು, ಬ್ಯಾಹಟ್ಟಿ ಮರುಳಸಿದ್ಧೇಶ್ವರ ಶಿವಾಚಾರ್ಯರು, ಸಂಗೊಳ್ಳಿ ಗುರುಲಿಂಗ ಶಿವಾಚಾರ್ಯರು, ಬಂಕಾಪುರದ ರೇವಣಸಿದ್ಧೇಶ್ವರ ಶಿವಾಚಾರ್ಯರು ಪಾಲ್ಗೊಂಡು ನುಡಿ ನಮನ ಸಲ್ಲಿಸಿದರು.

ಪ್ರವಚನ ನೆರವೇರಿಸಿದ ದಾನಯ್ಯ ದೇವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾಜಿ ಸಂಸದ ಮಂಜುನಾಥ ಕುನ್ನೂರು, ಮಾಜಿ ಶಾಸಕ ಎಸ್.ಐ. ಚಿಕ್ಕನಗೌಡ್ರ, ದ್ರುವ ಜತ್ತಿ, ಜತ್ತದ ಬಸವರಾಜ ಹಿರೇಮಠ, ಪ್ರಭುದೇವ ಸಾಲಿಮಠ, ಶ್ರೀಕಂಠಗೌಡ ಹಿರೇಗೌಡ್ರ, ಮುರುಳಿ ಬಡಿಗೇರ, ಗಂಗಾಧರ ನಾವಳ್ಳಿಮಠ, ಶಂಕರಗೌಡ ಪಾಟೀಲ, ಗುರುಸಿದ್ಧಯ್ಯ ಹಿರೇಮಠ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

ನೂಲ್ವಿಯ ಜಗನ್ನಾಥಗೌಡ ಸಿದ್ಧನಗೌಡ್ರ ಸ್ವಾಗತಿಸಿದರು. ಸವಣೂರಿನ ಡಾ. ಗುರುಪಾದಯ್ಯ ಸಾಲಿಮಠ, ತಿರುಮಲಕೊಪ್ಪದ ಹೆಚ್.ಎಂ. ಕರೇಕನ್ನಮ್ಮನವರ ನಿರೂಪಿಸಿದರು. ಯಲಿವಾಳದ ರಾಣಿ ಚೆನ್ನಮ್ಮಾ ಸ್ವಯಂ ಸೇವಾ ಸಂಸ್ಥೆಯ ಮಕ್ಕಳಿಂದ ಮಲ್ಲಕಂಬ ಪ್ರದರ್ಶನ ಜರುಗಿ-ತು. ಜಾನಪದ ಕಲಾ ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಸಮಾರಂಭಕ್ಕೂ ಮುನ್ನ ಶ್ರೀ ಜಗದ್ಗುರು ರೇಣುಕಾಚಾರ್ಯರ ರಥೋತ್ಸವ ಸಡಗರ ಸಂಭ್ರಮದಿಂದ ಜರುಗಿತು.

ಸಮಾರಂಭ ಉದ್ಘಾಟಿಸಿದ ಸಾವಯವ ಕೃಷಿ ತಜ್ಞೆ ಡಾ. ಕವಿತಾ ಮಿಶ್ರಾ ಮಾತನಾಡಿ, ರೈತ ದೇಶದ ಬೆನ್ನೆಲುಬು. ರೈತನೇ ನಿಜವಾದ ಶ್ರೀಮಂತ. ದೇಶದ ಜನತೆಗೆ ಅನ್ನ ಕೊಡುವ ಬಹು ದೊಡ್ಡ ಶಕ್ತಿ ಆತನಿಗಿದೆ. ಭೂಮಿ ತಾಯಿಗೆ ಬೆವರು ಸುರಿಸಿ ದುಡಿದರೆ ಭೂತಾಯಿ ಎಂದಿಗೂ ಕೈ ಬಿಡುವುದಿಲ್ಲ. ರೈತ ಮಹಿಳೆಯರ ಶ್ರಮ ಸಾಧನೆ ಮರೆಯುವಂತಿಲ್ಲ. ರಾಸಾಯನಿಕ ಗೊಬ್ಬರ ಹಾಕದೇ ಸಾವಯವ ಕೃಷಿಯಿಂದ ಬೆಳೆ ಬೆಳೆದರೆ ಅದರಿಂದ ಉತ್ತಮ ಆರೋಗ್ಯ ಭೂಮಿ ಫಲವತ್ತತೆ ಕಾಪಾಡಿಕೊಂಡು ಬರಲು ಸಾಧ್ಯವಾಗುತ್ತದೆ. ಕೊರೊನಾ ಸಂದರ್ಭದಲ್ಲಿ ಎಲ್ಲರೂ ಕೈ ಬಿಟ್ಟರೂ ರೈತ ಬೆಳೆ ಬೆಳೆದು ಜನ ಸಮುದಾಯಕ್ಕೆ ಅನ್ನ ಕೊಟ್ಟಿದ್ದನ್ನು ಗಮನಿಸಬಹುದು. ಚಿನ್ನವಿಲ್ಲದೇ ಬದುಕಬಹುದು ಅನ್ನವಿಲ್ಲದೇ ಮನುಷ್ಯ ಬದುಕಲಾರನೆಂದರು.

# ಆಳಸಮುದ್ರ ಗಣಿಗಾರಿಕೆ ಟೆಂಡರ್‌ಗಳನ್ನು ರದ್ದುಗೊಳಿಸುವಂತೆ ರಾಗಾ ಪತ್ರ


■ವಿಜಯಸಾಕ್ಷಿ ಸುದ್ದಿ, ನವದಹಲಿ

ಕೇರಳ, ಗುಜರಾತ್, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಕರಾವಳಿಯಲ್ಲಿ ಆಳ ಸಮುದ್ರ ಗಣಿಗಾರಿಕೆಗೆ ಅನುಮತಿ ನೀಡುವ ಟೆಂಡರ್‌ಗಳನ್ನು ರದ್ದುಗೊಳಿಸುವಂತೆ ಕೋರಿ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆದಿದ್ದಾರೆ.

ಸಮುದ್ರ ಜೀವಿಗಳಿಗೆ ಇರುವ ಅಪಾಯಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ಗಣಿಗಾರಿಕೆ ದುಷ್ಪರಿಣಾಮದ ಬಗ್ಗೆ ಯಾವುದೇ ಕಠಿಣ ಮೌಲ್ಯಮಾಪನವಿಲ್ಲದೆ ಖಾಸಗಿ ಕಂಪನಿಗಳಿಗೆ ಗಣಿಗಾರಿಕೆ ಬ್ಲಾಕ್‌ಗಳನ್ನು ತೆರೆಯುವುದು ಕಳವಳಕಾರಿ" ಎಂದು ಹೇಳಿದರು.

"ಕೇರಳ, ಗುಜರಾತ್ ಮತ್ತು ಅಂಡಮಾನ್ ಮತ್ತು ನಿಕೋಬಾರ್ ಕರಾವಳಿಯಲ್ಲಿ ಆಳ ಸಮುದ್ರ ಗಣಿಗಾರಿಕೆಗೆ ಅನುಮತಿ ನೀಡುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಬಲವಾಗಿ ಖಂಡಿಸಲು ನಾನು ನಿಮಗೆ ಬರೆಯುತ್ತಿದ್ದೇನೆ" ಎಂದು ಅವರು ಪ್ರಧಾನಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಆಳ ಸಮುದ್ರ ಗಣಿಗಾರಿಕೆಗೆ




ಟೆಂಡರ್‌ಗಳನ್ನು ಅದರ ಪರಿಸರ ಪರಿಣಾಮವನ್ನು ಮೌಲ್ಯಮಾಪನ ಮಾಡದೆಯೇ ಕರೆಯಲಾಗುತ್ತಿರುವ ವಿಧಾನದ ವಿರುದ್ಧ ಕರಾವಳಿ ಸಮುದಾಯಗಳು ಪ್ರತಿಭಟನೆ ನಡೆಸುತ್ತಿವೆ ಎಂದು ಗಾಂಧಿ ಹೇಳಿದರು.

ಲಕ್ಷಾಂತರ ಮೀನುಗಾರರು ತಮ್ಮ ಜೀವನೋಪಾಯ ಮತ್ತು ಜೀವನ ವಿಧಾನದ ಮೇಲೆ ಅದರ ಪರಿಣಾಮದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ ಎಂದು ಅವರು ಹೇಳಿದರು.

"ಸ್ಥಳೀಯ ಪಾಲುದಾರರೊಂದಿಗೆ ಸಮಾಲೋಚಿಸದೆ ಅಥವಾ ಪರಿಸರ ಅಧ್ಯಯನಗಳನ್ನು ನಡೆಸದೆ ಕೇರಳ, ಗುಜರಾತ್ ಮತ್ತು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಗಣಿಗಾರಿಕೆಗೆ ಅನುಮತಿ ನೀಡಿರುವುದನ್ನು ಖಂಡಿಸಿ ನಾನು ಪ್ರಧಾನಿ ಮೋದಿಗೆ ಪತ್ರ ಬರೆದಿದ್ದೇನೆ. ಗಣಿಗಾರಿಕೆ ಲಕ್ಷಾಂತರ ಮೀನುಗಾರರ ಜೀವನೋಪಾಯದ ಮೇಲೆ ಪರಿಣಾಮ ಬೀರುತ್ತದೆ. ನಮ್ಮ ವೈವಿಧ್ಯಮಯ ಸಮುದ್ರ ಜೀವಿಗಳಿಗೆ ಬದಲಾಯಿಸಲಾಗದಂತೆ ಹಾನಿ ಮಾಡುತ್ತದೆ. ಸರ್ಕಾರವು ಈ ನಿರ್ಧಾರವನ್ನು ತಕ್ಷಣವೇ ರದ್ದುಗೊಳಿಸಬೇಕು" ಎಂದು ಗಾಂಧಿ ತಮ್ಮ ವಾಟ್ಸಾಪ್ ಚಾನೆಲ್‌ನಲ್ಲಿ ಹೇಳಿದ್ದಾರೆ.

ಆಳ ಸಮುದ್ರ ಪ್ರದೇಶಗಳ ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಕಾಯ್ದೆ, 2023 ಭಾರಿ ಆಕ್ಷೇಪಣೆಗಳನ್ನು ಎದುರಿಸಿದೆ ಎಂದು ಕಾಂಗ್ರೆಸ್ ನಾಯಕರು ಹೇಳಿದರು.

ಗಣಿಗಾರಿಕೆ ಪ್ರಭಾವದ ಯಾವುದೇ ಕಠಿಣ ಮೌಲ್ಯಮಾಪನವಿಲ್ಲದೆ ಖಾಸಗಿ ವ್ಯಕ್ತಿಗಳಿಗೆ ಗಣಿಗಾರಿಕೆ ಬ್ಲಾಕ್‌ಗಳನ್ನು ತೆರೆಯುವುದು ಕಳವಳಕಾರಿಯಾಗಿದೆ ಎಂದು ಅವರು ಹೇಳಿದರು. ಅಧ್ಯಯನಗಳು ಸಮುದ್ರ ಜೀವಿಗಳಿಗೆ ಬೆದರಿಕೆಗಳು, ಹವಳದ ದಿಬ್ಬಗಳಿಗೆ ಹಾನಿ ಮತ್ತು ಮೀನು ಸಂತತಿಯ ಸವಕಳಿ ಸೇರಿದಂತೆ ಅದರ ಪ್ರತಿಕೂಲ ಪರಿಣಾಮಗಳನ್ನು ಸೂಚಿಸುತ್ತವೆ ಎಂದು ಅವರು ಹೇಳಿದರು.

ಈ ಹಿನ್ನೆಲೆಯಲ್ಲಿ, ಗಣಿ ಸಚಿವಾಲಯವು 13 ಕಡಲಾಚೆಯ ಬ್ಲಾಕ್‌ಗಳಿಗೆ ಪರವಾನಗಿ ನೀಡಲು ಟೆಂಡರ್‌ಗಳನ್ನು ಆಹ್ವಾನಿಸಿದಾಗ, ಈ ಕ್ರಮದ ವಿರುದ್ಧ ಪ್ರತಿಭಟನೆಗಳು ಭುಗಿಲೆದ್ದವು.

13 ಬ್ಲಾಕ್‌ಗಳಲ್ಲಿ ಕೊಲ್ಲಂ ಕರಾವಳಿಯಲ್ಲಿ ನಿರ್ಮಾಣ ಮರಳು ಗಣಿಗಾರಿಕೆಗೆ ಮೂರು ಬ್ಲಾಕ್‌ಗಳು, ಇದು ಪ್ರಮುಖ ಮೀನು ಸಂತಾನೋತ್ಪತ್ತಿ ಆವಾಸಸ್ಥಾನವಾಗಿದೆ. ಗ್ರೇಟ್ ನಿಕೋಬಾರ್ ದ್ವೀಪಗಳ ಕರಾವಳಿಯಲ್ಲಿ ಪಾಲಿಮೆಟಾಲಿಕ್ ಗಂಟುಗಳಿಗೆ ಮೂರು ಬ್ಲಾಕ್‌ಗಳು ಸೇರಿವೆ ಎಂದು ಗಾಂಧಿ ಹೇಳಿದರು; ಇದು ಸಮುದ್ರ ಜೀವವೈವಿಧ್ಯತೆಯ ತಾಣವಾಗಿದೆ.

ಪಾಲುದಾರರೊಂದಿಗೆ ಯಾವುದೇ ಸಮಾಲೋಚನೆ ಅಥವಾ ಕರಾವಳಿ ಸಮುದಾಯಗಳ ಮೇಲೆ ದೀರ್ಘಕಾಲೀನ ಸಾಮಾಜಿಕ-ಆರ್ಥಿಕ ಪ್ರಭಾವದ ಮೌಲ್ಯಮಾಪನವಿಲ್ಲದೆ ಟೆಂಡರ್‌ಗಳನ್ನು ಕರೆಯಲಾಗಿದೆ ಎಂದು ಮಾಜಿ ಕಾಂಗ್ರೆಸ್ ಮುಖ್ಯಸ್ಥರು ಹೇಳಿದ್ದಾರೆ.

ಕೇರಳ ವಿಶ್ವವಿದ್ಯಾಲಯದ ಜಲಚರ ಜೀವಶಾಸ್ತ್ರ ಮತ್ತು ಮೀನುಗಾರಿಕೆ ವಿಭಾಗದ ಸಾಗರ ಮೇಲ್ವಿಚಾರಣಾ ಪ್ರಯೋಗಾಲಯ (ಎಂಎಂಎಲ್) ನಡೆಸುತ್ತಿರುವ ಸಮೀಕ್ಷೆಯು ಆಳ ಸಮುದ್ರ ಗಣಿಗಾರಿಕೆಯು ಮೀನು ಸಂತಾನೋತ್ಪತ್ತಿಯ ಮೇಲೆ, ವಿಶೇಷವಾಗಿ ಕೊಲ್ಲಂನಲ್ಲಿ ವಿನಾಶಕಾರಿ ಪರಿಣಾಮ ಬೀರಬಹುದು ಎಂದು ಕಂಡುಹಿಡಿದಿದೆ ಎಂದು ಅವರು ಹೇಳಿದ್ದಾರೆ.

ಕೇರಳದಲ್ಲಿ 11 ಲಕ್ಷಕ್ಕೂ ಹೆಚ್ಚು ಜನರು ಮೀನುಗಾರಿಕೆಯನ್ನು ಅವಲಂಬಿಸಿದ್ದಾರೆ ಎಂದು ಗಮನಿಸಿದ ಅವರು, ಯಾವುದೇ ಪ್ರಮುಖವಾದದ್ದು ಅವರ ಸಾಂಪ್ರದಾಯಿಕ ಉದ್ಯೋಗವಾಗಿದೆ. ಅವರ ಜೀವನ ವಿಧಾನದೊಂದಿಗೆ ನಿಕಟ ಸಂಬಂಧ ಹೊಂದಿದೆ ಎಂದು ಹೇಳಿದರು.

ಗ್ರೇಟ್ ನಿಕೋಬಾರ್ ವೈವಿಧ್ಯಮಯ ಪರಿಸರ ವ್ಯವಸ್ಥೆಗಳಿಗೆ ಆಶ್ರಯ ನೀಡುವ ಜಾಗತಿಕವಾಗಿ ಗುರುತಿಸಲ್ಪಟ್ಟಿದೆ ಮತ್ತು ಹಲವಾರು ಸ್ಥಳೀಯ ಜಾತಿಯ ವನ್ಯಜೀವಿಗಳಿಗೆ ನೆಲೆಯಾಗಿದೆ. "ಆಳ ಸಮುದ್ರ ಗಣಿಗಾರಿಕೆಯಿಂದ ಉಂಟಾಗುವ ಯಾವುದೇ ಹಾನಿಯು ಸರಿಪಡಿಸಲಾಗದ ಹಾನಿಯನ್ನು ಉಂಟುಮಾಡಬಹುದು.

# ರಂಜಾನ್ ಆಚರಣೆ: ಮುಸ್ಲಿಮರ ಮೇಲೆ ಹಿಂದುಗಳಿಂದ ಹೂ ಸುರಿದು ಏಕತೆಗೆ ಕರೆ

■ವಿಜಯಸಾಕ್ಷಿ ಸುದ್ದಿ, ನವದಹಲಿ

ರಾಜಸ್ಥಾನದ ಜೈಪುರದಲ್ಲಿ ಹಿಂದೂಗಳ ಗುಂಪೊಂದು ಈದ್ ಅಲ್-ಫಿತರ್ ಆಚರಣೆಯಲ್ಲಿ ಭಾಗವಹಿಸಿ ಒಗ್ಗಟ್ಟು ಮತ್ತು ಕೋಮು ಸೌಹಾರ್ದತೆಯ ಪ್ರಬಲ ಸಂಕೇತವಾದ ಹೂವುಗಳನ್ನು ಮುಸ್ಲಿಂ ಸುರಿದು ಏಕತೆಗೆ ಕರೆ ನೀಡಿದೆ.

ದೆಹಲಿ ರಸ್ತೆಯಲ್ಲಿರುವ ಈದ್ಗಾದಲ್ಲಿ ನಡೆದ ಈ ಕಾರ್ಯವನ್ನು ಹಿಂದೂ-ಮುಸ್ಲಿಂ ಏಕತಾ ಸಮಿತಿಯು ಆಯೋಜಿಸಿತ್ತು. ಇದು ಎರಡು ಧಾರ್ಮಿಕ ಸಮುದಾಯಗಳ ನಡುವಿನ ಏಕತೆಯ ಮನೋಭಾವವನ್ನು ಪ್ರತಿಬಿಂಬಿಸಿದೆ.

ದೇಶಾದ್ಯಂತ ಈದ್ ಹಬ್ಬವನ್ನು ಸಂಭ್ರಮ ಮತ್ತು ಸಂತೋಷದಿಂದ ಆಚರಿಸುತ್ತಿರುವಾಗ, ಜೈಪುರದಲ್ಲಿ ಒಗ್ಗಟ್ಟು ಮತ್ತು ಸಹೋದರತ್ವದ ಪ್ರದರ್ಶನ ಕಂಡುಬಂದಿತು.

ಈದ್ ಪ್ರಾರ್ಥನೆ ಸಲ್ಲಿಸಲು ನೆರೆದಿದ್ದ ಮುಸ್ಲಿಮರಿಗೆ ಹಿಂದೂಗಳು ಹೂವುಗಳನ್ನು ಸುರಿಯುವ ಹೃದಯಸ್ಪರ್ಶಿ ಕ್ಷಣವನ್ನು ಕಾರ್ಯಕ್ರಮದ ವೀಡಿಯೊಗಳು ಸೆರೆಹಿಡಿದಿವೆ.

ರಾಜಸ್ಥಾನದ ಮುಖ್ಯ ಖಾಜಿ ಖಾಲಿದ್ ಉಸ್ಮಾನಿ ಅವರ ನೇತೃತ್ವದಲ್ಲಿ



ಪ್ರಾರ್ಥನೆಗಳು ನಡೆದವು ಮತ್ತು ಸಾವಿರಾರು ಮುಸ್ಲಿಮರು ಹಾಜರಿದ್ದರು. ಭಾರತದ ಮುಸ್ಲಿಂ ಅಲ್ಪಸಂಖ್ಯಾತರನ್ನು ಗುರಿಯಾ ಗಿಸಿಕೊಂಡು ಹಿಂದೂ ಬಲಪಂಥೀಯ ಅಭಿಯಾನ ಹೆಚ್ಚುತ್ತಿರುವ ಸಮಯದಲ್ಲಿ ಸಮುದಾಯಗಳ ನಡುವೆ ಉದ್ವಿಗ್ನತೆಯನ್ನು ಉಂಟುಮಾಡುವ ಈ ದಯೆ ಮತ್ತು ಸಹೋದರತ್ವದ ಈ ಮಹತ್ಕಾರ್ಯ ಎಲ್ಲರ ಶ್ಲಾಘನೆಗೆ ಒಳಗಾಗಿದೆ.


ಈದ್ ಸಮಯದಲ್ಲಿ ಹೂವಿನ ಮಳೆಯು ಸವಾಲುಗಳ ನಡುವೆ ಪರಸ್ಪರ ಗೌರವ ಮತ್ತು ತಿಳುವಳಿಕೆಯ ಪ್ರಾಮುಖ್ಯತೆಯ ಸಕಾಲಿಕ ಜ್ಞಾಪನೆಯಾಗಿ ಕಾರ್ಯನಿರ್ವಹಿಸಿದೆ.

ಈ ಕಾರ್ಯಕ್ರಮವನ್ನು ಏಕತೆ ಮತ್ತು ಶಾಂತಿಯ ಬಲದ ಆಶಾದಾಯಕ ಸಂಕೇತವೆಂದು ಪರಿಗಣಿಸಲಾಗಿದೆ.

ವಿವಿಧ ಧಾರ್ಮಿಕ ಹಿನ್ನೆಲೆಯ ಜನರು ಸಾಮರಸ್ಯಕ್ಕೆ ಹಂಚಿಕೆಯ ಬದ್ಧತೆಯ ಆಚರಣೆಯಲ್ಲಿ ಒಟ್ಟಿಗೆ ಸೇರಿದ್ದರು.

ಭಾರತದಾದ್ಯಂತ ಆಚರಣೆಗಳು ದೆಹಲಿಯ ಐತಿಹಾಸಿಕ ಜಾಮಾ ಮಸೀದಿ ಮತ್ತು ಸುತ್ತಮುತ್ತ ಜನರು ಈದ್ ಆಚರಿಸಲು ಮತ್ತು ಪ್ರಾರ್ಥನೆ ಸಲ್ಲಿಸಲು ಒಟ್ಟುಗೂಡಿದರು. "ಇದು ಮುಸ್ಲಿಮರ ಅತಿದೊಡ್ಡ ಹಬ್ಬ. ಇಂದು, ದೇಶವು ಪ್ರಗತಿ ಹೊಂದಲಿ ಮತ್ತು ನಮ್ಮ ಸಹೋದರತ್ವವು ಅಖಂಡವಾಗಿರಲಿ ಎಂದು ನಾವು ಇಲ್ಲಿ ಪ್ರಾರ್ಥಿಸಿದ್ದೇವೆ. ಪ್ರಧಾನಿ ಮೋದಿ ಅವರು ಆರೋಗ್ಯವಾಗಿರಲಿ ಮತ್ತು ದೀರ್ಘಕಾಲ ಬದುಕಲಿ ಎಂದು ನಾವು ಅವರಿಗೆ ಪ್ರಾರ್ಥನೆ ಸಲ್ಲಿಸಿದ್ದೇವೆ" ಎಂದು ಭಕ್ತರೊಬ್ಬರು ಹೇಳಿರುವುದಾಗಿ ಸುದ್ದಿ ಸಂಸ್ಥೆ ANI ಉಲ್ಲೇಖಿಸಿದೆ.

# ಗರುಡಗಂಬಕ್ಕೆ ಪಂಚಾಮೃತ ಅಭಿಷೇಕ



■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿಯ ಸಮೀಪದ ತಿಮ್ಮಾಪೂರ ಗ್ರಾಮದಲ್ಲಿ ಶ್ರೀ ಮಾರುತೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ಗರುಡಗಂಬಕ್ಕೆ ಪಂಚಾಮೃತ ಅಭಿಷೇಕ, ಮನ್ಯಸು ಹೋಮವನ್ನು ನೆರವೇರಿಸಲಾಯಿತು.

ಹುಬ್ಬಳ್ಳಿಯ ವೇ.ಮೂ ಗಂಗಾಧರ ಸಂಗಮ ಶಾಸ್ತ್ರಿ ಹಾಗೂ ಗುರುಪ್ರಸಾದ್ ಭಟ್ ಅವರ ನೇತೃತ್ವದಲ್ಲಿ ಪೂಜಾ ಕೈಂಕರ್ಯಗಳು ನೆರವೇರಿದವು. ಕಾರ್ಯಕ್ರಮದಲ್ಲಿ ಹಿರಿಯರಾದ ರಾಮಣ್ಣ ದೇಸಾಯಿ, ರೈತ ಸಂಘದ ಗದಗ ಜಿಲ್ಲಾಧ್ಯಕ್ಷ ಯಲ್ಲಪ್ಪ ಎಚ್.ಬಾಬರಿ, ಸಂಗಪ್ಪ ಮಳ್ಳಿ, ಬಸಪ್ಪ ಸತ್ಯಪ್ಪನವರ, ಚಿನ್ನಪ್ಪ ಬಿಸನಳ್ಳಿ, ಯಲ್ಲಪ್ಪ ಜೋಗಿನ ರಾಮಣ್ಣ ಬಾಜಿ, ಅರ್ಚಕರಾದ ಶೇಖಪ್ಪ ಪೂಜಾರ, ಹನುಮಪ್ಪ ಪೂಜಾರ, ಶ್ರೀಕಾಂತ ಪೂಜಾರ, ಶಂಕ್ರಪ್ಪ ಪೂಜಾರಿ ಸೇರಿದಂತೆ ಭಕ್ತರು ಪಾಲ್ಗೊಂಡಿದ್ದರು.


# ಅನ್ನದಾತನ ಬದುಕು ಹಸನಾಗಲಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮುಕ್ತಿಮಂದಿರ ಧರ್ಮಕ್ಷೇತ್ರದ ಪಟ್ಟಾಧ್ಯಕ್ಷರಾದ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು ಯುಗಾದಿ ಪಾಡ್ಯದ ದಿನ ಶ್ರೀಮಠದ ಜಮೀನಿನಲ್ಲಿ ಭೂಮಿಪೂಜಾ ಕಾರ್ಯ ನೆರವೇರಿಸಿ ಕೃಷಿ ಚಟುವಟಿಕೆಗಳಿಗೆ ಚಾಲನೆ ನೀಡಿದರು.

ಈ ವೇಳೆ ಶುಭಾಶೀರ್ವಾದ ಸಂದೇಶ ನೀಡಿದ ಅವರು, ಈ ವರ್ಷ ಉತ್ತಮ ಮಳೆ-ಬೆಳೆಯಾಗಿ ಜಗತ್ತಿನ ಸಕಲ ಜೀವರಾಶಿಗಳಿಗೆ ಅನ್ನ ನೀಡುವ ಅನ್ನದಾತನ ಬದುಕು ಹಸನಾಗಲಿ. ಕೃಷಿ ನಮ್ಮ ಸಂಸ್ಕೃತಿಯಾಗಿದ್ದು, ಈ ಬಗ್ಗೆ ಯಾರಲ್ಲಿಯೂ ಕೀಳರಿಮೆಯಿಲ್ಲದೇಹೆಮ್ಮೆಯಿಂದ ತೊಡಗಿಸಿಕೊಳ್ಳಬೇಕು.

ಭೂಮಿತಾಯಿಯನ್ನು ನಂಬಿ ಬದುಕಿದವರಿಗೆ ಎಂದೂ



ಕೇಡಾಗದು.

ರೈತರು ಸಾವಯುವ ಕೃಷಿಯತ್ತ ಚಿತ್ತ ಹರಿಸಬೇಕು. ವಿಶ್ವವಸು ಸಂವತ್ಸರವು ಎಲ್ಲರ ಬಾಳಲಿ ಸುಖ, ಶಾಂತಿ, ನೆಮ್ಮದಿ ತರಲಿ ಎಂದು ಹಾರೈಸಿದರು.

ಯುಗಾದಿ ಪಾಡ್ಯದಂದು ಬೆಳಿಗ್ಗೆ ಎಲ್ಲರೂ ಹೊಸ ಉಡುಗೆ ತೆ-ೂಟ್ಟು ಶ್ರದ್ಧಾ ಭಕ್ತಿಯಿಂದ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ, ಹಿರಿಯರಿಗೆ ನಮಸ್ಕರಿಸಿ ಬೇವು-ಬೆಲ್ಲ ಹಂಚುವದು, ವಿಶೇಷವಾಗಿ ರೈತ ಸಮುದಾಯ ನಸುಕಿನಲ್ಲಿಯೇ ತಮ್ಮ ಜೀವನಾಡಿ ಎತ್ತುಗಳ ಮೈ ತೊಳೆದು, ಶೃಂಗರಿಸಿಕೊಂಡು ಹೊಲಕ್ಕೆ ತೆರಳಿ ಭೂಮಿತಾಯಿ, ಎತ್ತು ಹಾಗೂ ಕೃಷಿ ಪರಿಕರಗಳಿಗೆ ಪೂಜೆ ಸಲ್ಲಿಸಿ ಕೃಷಿ ಚಟುವಟಿಕೆಗಳಿಗೆ ಸಾಂಕೇತಿಕ ಚಾಲನೆ ನೀಡಿದರು.

ವ್ಯಾಪಾರಸ್ಥರು ಅಂಗಡಿ ಮುಂಗಟ್ಟುಗಳಿಗೆ ಪೂಜೆ ಸಲ್ಲಿಸಿದರು. ಕೆಲವರು ಹೊಸ ವ್ಯವಹಾರ ಪ್ರಾರಂಭಿಸಿದರೆ, ಅನೇಕರು ಹೊಸ ಮನೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದರು.

ಹೊಸ ವರ್ಷದ ದಿನ ಆಭರಣ, ಬಟ್ಟೆ, ಇಲೆಕ್ಟ್ರಾನಿಕ್, ಹೊಸ ವಾಹನ ಖರೀದಿ, ಭೂಮಿಪೂಜೆ ಇತರೆಲ್ಲ ಶುಭ ಕಾರ್ಯಗಳನ್ನು ಕೈಗೊಂಡರು. ಪಟ್ಟಣ ಸೇರಿ ಗ್ರಾಮೀಣ ಪ್ರದೇಶಗಳಲ್ಲಿ ಊರ ದೇವರ ಜಾತ್ರೆ, ಉತ್ಸವ, ಪೂಜೆಗಳು ನೆರವೇರಿದವು.

## ಅ.ಭಾ.ವೀ.ಮಹಾಸಭಾ ಜಿಲ್ಲಾ ಘಟಕದ ಮಾಸಿಕ ಸಭೆ

■ವಿಜಯಸಾಕ್ಷಿ ಸುದ್ದಿ, ಗದಗ

ಅಖಿಲ ಭಾರತ ವೀರಶೈವ ಮಹಾಸಭಾ ಗದಗ ಜಿಲ್ಲಾ ಘಟಕದ ಪದಾಧಿಕಾರಿಗಳ, ಕಾರ್ಯಕಾರಿ ಮಂಡಳಿಯ ಹಾಗೂ ಗದಗ ಜಿಲ್ಲೆಯ ಎಲ್ಲ ತಾಲೂಕಾ ಘಟಕಗಳ ಅಧ್ಯಕ್ಷರುಗಳ ಮಾಸಿಕ ಸಭೆ ಗದುಗಿನ ವೀರಶೈವ ಜನರಲ್ ಲೈಬ್ರರಿಯ ಆವರಣದಲ್ಲಿ ಜರುಗಿತು.

ಬಸವ ಜಯಂತಿ ಕಾರ್ಯಕ್ರಮ ಆಚರಿಸುವ ಬಗ್ಗೆ ಹಾಗೂ ರಾಜ್ಯ ಮಹಾಸಭೆಯಲ್ಲಿ ಜರುಗಿದ ಸಭೆಯ ಮಾಹಿತಿ ಕುರಿತು ಚರ್ಚಿಸಲಾಯಿತು. ಇದೇ ಸಂದರ್ಭದಲ್ಲಿ ಕಾರ್ಯಕಾರಿಣಿ ಮಂಡಳಿ ಸದಸ್ಯರಾಗಿ ಸೇರ್ಪಡೆಯಾದ ವಿದ್ಯಾವತಿ ಗಡಗಿ, ಬೆಂಗಳೂರು ಮಹಾಸಭೆಗೆ ಮಹಿಳಾ ಘಟಕದ ಉಪಾಧ್ಯಕ್ಷರಾಗಿ ಆಯ್ಕೆಯಾದ ವಿಜಯಲಕ್ಷ್ಮೀ ಮಾನ್ವಿ ಅವರನ್ನು ಸನ್ಮಾನಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಮಹಾಸಭಾದ ಅಧ್ಯಕ್ಷ ಶರಣಬಸಪ್ಪ ಗುಡಿಮನಿ ವಹಿಸಿದ್ದರು. ಸಭೆಯಲ್ಲಿ ಕಾರ್ಯಕಾರಿ ಮಂಡಳಿಯ ಸದಸ್ಯರು ಸಲಹೆ ಸೂಚನೆ ನೀಡಿದರು ಎಂದು ಕಾರ್ಯದರ್ಶಿ ಮುರುಘರಾಜೇಂದ್ರ ಬಡ್ನಿ ತಿಳಿಸಿದ್ದಾರೆ.

## ಪೊಲೀಸ್ ಎನ್‌ಕೌಂಟರ್‌ಗೆ ಮಹಿಳಾ ನಕ್ಸಲ್ ನಾಯಕಿ ಬಲಿ

■ವಿಜಯಸಾಕ್ಷಿ ಸುದ್ದಿ, ಛತ್ತೀಸ್‌ಗಢ

ಛತ್ತೀಸ್‌ಗಢದ ದಂತೇವಾಡದಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ದಂಡಕಾರಣ್ಯ ವಿಶೇಷ ವಲಯ ಸಮಿತಿಯ ಮಹಿಳಾ ಸದಸ್ಯೆ ಮತ್ತು ಇತರ ಹಲವಾರು ಮಾವೋವಾದಿಗಳು ಸಾವನ್ನಪ್ಪಿದ್ದಾರೆ.



ಶರಣ ಸಂಸ್ಕೃತಿಯ ಪಾವನ ತಾಣ ಮುಳಗುಂದ ಪಟ್ಟಣದ ಸಿದ್ದೇಶ್ವರ ಮಾಹಾ ರಥೋತ್ಸವವು ರವಿವಾರ ಸಾಯಂಕಾಲ ಸಕಲ ವಾದ್ಯ ಮೇಳಗಳೊಂದಿಗೆ ಸಡಗರ ಸಂಭ್ರಮದಿಂದ ಜರುಗಿತು. ನೂರಾರು ಸದ್ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಪುನೀತರಾದರು.

### ಡಂಬಳದ ಈದ್ಗಾ ಮೈದಾನದಲ್ಲಿ ರಂಜಾನ್ ಪ್ರಯುಕ್ತ ಸಾಮೂಹಿಕ ಪ್ರಾರ್ಥನೆ

# ರಂಜಾನ್ ಹಬ್ಬ ಜೀವನದ ಪಾಠ ಕಲಿಸುತ್ತದೆ

■ವಿಜಯಸಾಕ್ಷಿ ಸುದ್ದಿ, ಡಂಬಳ

ತಿಂಗಳಿಡೀ ಕಠಿಣ ಉಪವಾಸದ ಆಚರಣೆಯ ಮೂಲಕ ಆಚರಿಸುವ ರಂಜಾನ್ ಹಬ್ಬದಿಂದ ಮಾನವೀಯ ಮೌಲ್ಯ ಪ್ರಾಪ್ತಿ ಆಗುತ್ತದೆ ಎಂದು ಮುಸ್ಲಿಂ ಸಮಾಜದ ಧರ್ಮಗುರು ಖಾದರಸಾಬ ಮುಲ್ಲಾ ಹೇಳಿದರು.

ಗ್ರಾಮದ ಈದ್ಗಾ ಮೈದಾನದಲ್ಲಿ ರಂಜಾನ್ ಪ್ರಯುಕ್ತ ಜರುಗಿದ ಪ್ರಾರ್ಥನೆಯ ನಂತರ ಮಾತನಾಡಿದ ಅವರು, ಉತ್ತಮ ಮಳೆ ಬೆಳೆಯಾಗಿ ರೈತರಿಗೆ ಆರ್ಥಿಕ ಶಕ್ತಿ, ತನ್ಮೂಲಕ ದೇಶದ ಶಕ್ತಿ ಹೆಚ್ಚಾಗಲಿ, ಎಲ್ಲರಿಗೂ ಆರೋಗ್ಯ ಕರುಣಿಸಲಿ ಎಂದು ಪ್ರಾರ್ಥನೆ ಸಲ್ಲಿಸಿದರು.

ರಂಜಾನ್ ಹಬ್ಬ ಮುಸ್ಲಿಮರಿಗೆ ಜೀವನದ ಅನೇಕ ಪಾಠ ಕಲಿಸಿಕೊಡುತ್ತದೆ. ಮನುಷ್ಯನ ದೇಹವನ್ನು ಹಸಿವಿಗೆ ಒಳಪಡಿಸಿ ಗೆಲ್ಲುವುದು ಅತ್ಯಂತ ಕಠಿಣ ವೃತ. ಇಂತಹ ವೃತ-ಆಚರಣೆಗಳನ್ನು ಮಾಡುವುದರಿಂದ ಹಸಿವಿನ ಕುರಿತು ತಿಳಿಯುತ್ತದೆ ಮತ್ತು ಉಪವಾಸ ಆಚರಣೆ ಮಾಡುವುದರ ಮೂಲಕ ಪ್ರತಿಯೊಬ್ಬರೂ ಕೆಟ್ಟ ವಿಚಾರ, ಕೆಟ್ಟ ಕೆಲಸಗಳನ್ನು ಬಿಟ್ಟು ಎಲ್ಲರನ್ನು ಸಹೋದರತ್ವದ ಭಾವನೆಯಿಂದ ಕಾಣಬೇಕು ಎಂದರು.



ಡಂಬಳ ಹೋಬಳಿಯ ಗ್ರಾಮಗಳಲ್ಲಿ ಮುಸ್ಲಿಂ ಬಾಂಧವರು ಈದ್ ಉಲ್ ಫಿತರ್‌ನ್ನು ಶ್ರದ್ಧಾ-ಭಕ್ತಿ, ಸಡಗರ, ಸಂಭ್ರಮದಿಂದ ಸಾಮೂಹಿಕ ಪ್ರಾರ್ಥನೆ ಮಾಡುವ ಮೂಲಕ ಆಚರಿಸಿದರು. ಸೋಮವಾರ ಬೆಳಿಗ್ಗೆ ಜುಮ್ಮಾ ಮಸೀದಿ ಮೂಲಕ ಹೊರಟು ಈದ್ಗಾ ಮೈದಾನದಲ್ಲಿ ಹಿರಿಯರು, ಯುವಕರು ಶ್ವೇತವಸ್ತ್ರಧಾರಿಗಳಾಗಿ ಆಗಮಿಸಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಸಾಮೂಹಿಕ ಪ್ರರ್ಥನೆ ಬಳಿಕ ಪರಸ್ಪರ ಆಲಂಗಿಸಿಕೊಂಡು ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ನಂತರ ಸ್ನೇಹಿತರು ಹಾಗೂ ಸಂಬಂಧಿಕರ ಮನೆಗಳಿಗೆ ತೆರಳಿ, ರಂಜಾನ್ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಹಬ್ಬದ ನಿಮಿತ್ತ ಮನೆಗಳಲ್ಲಿ ಗೋಡಂಬಿ, ಪಿಸ್ತಾ, ಬಾದಾಮ ಮತ್ತಿತರ ಪದಾರ್ಥಗಳೊಂದಿಗೆ ತಯಾರಿಸಿದ ಸುರಕುಂಬ (ಪಾಯಸ) ಸವಿದರು. ಅಕ್ಕಪಕ್ಕದ ಮನೆಯವರಿಗೂ ಸುರಕುಂಬ ನೀಡಿ, ಸೌಹಾರ್ದತೆ ಮೆರೆದರು.

ರಂಜಾನ್ ನಿಮಿತ್ತ ಖಾದರಸಾಬ ಮುಲ್ಲಾ ಧರ್ಮಗುರುಗಳ ಸಮ್ಮುಖದಲ್ಲಿ ಕುರಾನ್ ಪಠಣ ಸೇರಿದಂತೆ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲಾಯಿತು. ಈ ವೇಳೆ ಈದ್ಗಾ ಮೈದಾನದ ಹೊರಗಡೆ ಇದ್ದ ಬಡವರಿಗೆ ದಾನ ನಡೆಯಿತು. ಪ್ರತಿ ಮನೆಯಲ್ಲೂ ಈದ್ ಉಲ್ ಫಿತರ್‌ಹಬ್ಬದ ಸಂಭ್ರಮ ಮನೆ ಮಾಡಿತ್ತು. ಮಕ್ಕಳು, ಮಹಿಳೆಯರು, ಯುವತಿಯರು ಹೊಸ ಬಟ್ಟೆ ಧರಿಸಿ ಸಂಭ್ರಮದಿಂದ ಹಬ್ಬ ಆಚರಿಸಿದರು.

ಈ ಸಂದರ್ಭದಲ್ಲಿ ಅಂಜುಮನ್ ಅಧ್ಯಕ್ಷ ಬಸೀರಹಮ್ಮದ ತಾಂಬೋಟಿ, ಖಾಜಾಹುಸೇನ ಹೊಸಪಟಿ, ಜಂದಿಸಾಬ ಸರಕಾವಾಸ, ಹುಸೇನಸಾಬ ಮೂಲಿಮನಿ, ಜಾಕೀರ ಮೂಲಿಮನಿ, ಬುಡ್ನೆಸಾಬ ಅತ್ತಾರ, ಶಫೀಕ ಮೂಲಿಮನಿ, ಹುಸೇನಸಾಬ ದೊಡ್ಡಮನಿ, ಮಮ್ಮದರಫೀಕ ಮನಿಯಾರ, ಬಾಬುಸಾಬ ಸರಕಾವಾಸ, ಮುರ್ತುಜಾ ಮನಿಯಾರ, ಫೇರೋಜಖಾನ ಹೊಸಪೇಟಿ, ಹುಸೇನಸಾಬ ಹೊಸಬಾವಿ, ನೂರಹಮ್ಮದ ಸರಕಾವಾಸ, ರಾಯಸಾಬ ಕಾಸ್ತಾರ, ಇಂತಿಯಾಜ ದಫೇದಾರ, ರಿಯಾಜ ಚಾಂದಖಾನವರ, ಮಹಮ್ಮದರಫೀಕ ಹೊಸಪೇಟಿ, ಎಮ್.ಆರ್. ಆಲೂರ, ರಜಾಕಸಾಬ ತಾಂಬೋಟಿ, ಮಾಬುಸಾಬ ಸರಕಾವಾಸ, ಮಹಮ್ಮದಗೌಸ ಅತ್ತಾರ ಮುಂತಾದವರಿದ್ದರು.

### ತಳಬಾಳ ಕಾಲೇಜಿನಲ್ಲಿ ಜಾನಪದ ಉತ್ಸವ

# ಜನಪದ ಹಾಡುಗಳಲ್ಲಿದೆ ಅನುಭವ-ನೀತಿ: ಹಳ್ಳಿಕೇರಿಮಠ

■ ಯುವಪೀಳಿಗೆಯ ಪಾಶ್ಚಿಮಾತ್ಯ ಸಂಸ್ಕೃತಿ ವ್ಯಾಮೋಹ ಖೇದಕರ ■ ಆಧುನಿಕ ತಂತ್ರಜ್ಞಾನದಿಂದ ಜಾನಪದ ಅವಸಾನದತ್ತ

■ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಜನಪದರು ತಾವು ಕಂಡುಂಡ ನೋವು ನಲಿವುಗಳನ್ನು ಹಾಡುಗಳ ಮೂಲಕ ವ್ಯಕ್ತಪಡಿಸಿದ್ಧಾರೆ, ಅವುಗಳಲ್ಲಿ ಅನುಭದ ನೀತಿಯ ಸಾರವಿದ್ದು, ಸಂಸ್ಕಾರವನ್ನು ಕಲಿಸುತ್ತವೆ ಎಂದು ಜನಪದ ಕಲಾವಿದ ಗವಿಶಿದ್ಧಯ್ಯ ಜ ಹಳ್ಳಿಕೇರಿಮಠ ಅಭಿಪ್ರಾಯಪಟ್ಟರು.

ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನ ತಳಬಾಳದ ಸರಕಾರಿ ವಸತಿಯುಕ್ತ ಮಾದರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಈಚೆಗೆ ಜಾನಪದ ಉತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪಾಶ್ಚಿಮಾತ್ಯ ಸಂಸ್ಕೃತಿಯ ವ್ಯಾಮೂಹದ ಅಬ್ಬರಕ್ಕೆ ಸಿಲುಕಿರುವ ಇಂದಿನ ವಿದ್ಯಾರ್ಥಿಗಳು ಮೂಲ ಕಲೆಗಳನ್ನು ಮರೆಯುತ್ತಿದ್ಧಾರೆ ಅಶ್ಲೀಲ ಹಾಡುಗಳತ್ತ ಮುಖ ಮಾಡುತ್ತಿರುವುದು ಖೇದಕರವಾಗಿದ್ದು



ವಿದ್ಯಾರ್ಥಿಗಳು ಮೂಲ ಜನಪದ ಗೀತೆಗಳತ್ತ ಆಸಕ್ತಿ ಬೆಳಸಿಕೊಂಡು ಅವುಗಳನ್ನು ಉಳಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಹಳ್ಳಿಗಾಡಿನ ನಮ್ಮ ಪರಂಪರೆಗಳು ಬಾಳಿ ಬದುಕುವ ದಾರಿಯನ್ನು ತೋರುತ್ತವೆ ಕಾಯಕ ತತ್ವ ,ಕೂಡಿ ಬಾಳುವ ಔದಾರ್ಯ ಮಾನವೀಯ ನೆಲೆಗಟ್ಟಿನ ಸತ್ಯವನ್ನು ತೊರ್ಪಡಿಸುತ್ತವೆ ಎಂದು ಜನಪದ ಸಾಹಿತ್ಯದ ಬಗ್ಗೆ ಅನೇಕ ವಿಷಯಗಳನ್ನು ಹಂಚಿಕೊಳ್ಳುತ್ತಾ ವಿದ್ಯಾರ್ಥಿಗಳೊಂದಿಗೆ ಸಂವಾದ ಮಾಡುತ್ತ ಗ್ರಾಮೀಣ ಪರಂಪರೆಯನ್ನು ಕಣ್ಮುಂದೆ ತೆರದಿಟ್ಟರಲ್ಲದೆ ವಿವಿಧ ಭಾಗದ ಜನಪದ ಗೀತೆಗಳನ್ನು ಹಾಡುವುದರೊಂದಿಗೆ ವಿದ್ಯಾರ್ಥಿಗಳನ್ನು ರಂಜಿಸಿದರು.

ಕಾರ್ಯಕ್ರಮದ ಸಂಯೋಜಕರಾದ ಶ್ರೀಮತಿ ಪುಷ್ಪಾವತಿ. ಕನಸಾವಿಯವರು ಪ್ರಾಸ್ತಾವಿಕ ಮಾತನಾಡಿ, ನಮ್ಮ ಜನಪದ ಸಾಹಿತ್ಯವು ಕತೆ, ಕವನ, ಲಾವಣಿ, ಒಗಟುಗಳ ಮೂಲಕ ಜನಸಾಮಾನ್ಯರಿಗೆ ನೀತಿಯನ್ನು ಬೋಧಿಸಿವೆ; ಆಧ್ಯಾತ್ಮವನ್ನು ತಿಳಿಸಿವೆ. ಯುವಜನತೆ ಇಂದಿನ ಆಧುನಿಕ ನಾಗರಿಕತೆಯ ಪ್ರಭಾವದಿಂದ ನಮ್ಮ ಸಂಸ್ಕೃತಿಯ ಸಾರವಾದ ಜನಪದ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯನ್ನು ಮರೆಯುತ್ತಿದ್ದಾರೆ. ಸಿನೇಮಾ, ದೂರದರ್ಶನ ಮತ್ತು ಮೋಬೈಲ್‌ನಂತಹ ಆಧುನಿಕ ತಂತ್ರಜ್ಞಾನದ ಬಳಕೆಯ ಗೀಳಿಗೆ ಅಂಟಿಕೊಂಡಿದ್ದು, ಜಾನಪದ ಅವಸಾನದತ್ತ ಸಾಗಿದೆ ಎಂದು ವಿಷಾದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಶುಭಾ ಮಾತನಾಡಿ, ಜನಪದ ಕಲೆ, ರಂಗಭೂಮಿ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಲಿಯುವ ಮೂಲಕ ನಮ್ಮ ದೇಶಿಯ ಸಂಸ್ಕೃತಿಯ ಸೊಗಡನ್ನು ಉಳಿಸಬೇಕಾಗಿದೆ. ಆಧುನಿಕ ಜೀವನ ಶೈಲಿಯಲ್ಲಿ ದೇಶಿಯ ಸಂಸ್ಕೃತಿಯನ್ನು ಮರುಕಳಿಸುವ ಉದ್ದೇಶದಿಂದ ಹಾಗೂ ದೇಸಿ ಸಂಸ್ಕೃತಿಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಸಲುವಾಗಿ ಕಾಲೇಜು ಶಿಕ್ಷಣ ಇಲಾಖೆಯು " ನಮ್ಮ ಸಂಸ್ಕೃತಿ- ನಮ್ಮ ಹೆಮ್ಮೆ" ಎಂಬ ಶೀರ್ಷಿಕೆಯಡಿಯಲ್ಲಿ ಜಾನಪದ ಉತ್ಸವವನ್ನು ಕೈಗೊಂಡಿರುವುದು ಸಂತೋಷದ ಸಂಗತಿ ಎಂದರು.

ನವೀನ್ ಮರೀಗೌಡರ್ ನಿರೂಪಿಸಿದರು. ಸಂಗೀತ ಕಲ್ಗುಡಿ ಸ್ವಾಗತಿಸಿದರು. ಸುರೇಶಕುಮಾರ್ ರಾಜೂರು ಅತಿಥಿ ಪರಿಚಯ ಮಾಡಿಕೊಟ್ಟರು. ಸುರೇಶ ಮೈನಳ್ಳಿ ವಂದಿಸಿದರು.

# ನಾವೆಲ್ಲರೂ ಧರ್ಮ ಮಾರ್ಗದಲ್ಲಿ ಸಾಗೋಣ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮುಸ್ಲಿಂ ಬಾಂಧವರ ಶ್ರದ್ಧಾ ಭಕ್ತಿಯ ಹಬ್ಬವಾಗಿರುವ ರಂಜಾನ್ ಮಾಸಾಂತ್ಯದ ದಿನವಾದ ಸೋಮವಾರ ಮುಸ್ಲಿಂ ಬಂಧುಗಳು ಈದ್ ಉಲ್‌ಫಿತರ್ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಪಟ್ಟಣದ ಮುಕ್ತಿಮಂದಿರ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಸಮಾಜದ ಸಾವಿರಾರು ಜನರು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡರು.




ಈದ್-ಉಲ್-ಫಿತರ್ ಹೆಸರಿನಿಂದ ಕರೆಯಲ್ಪಡುವ ರಂಜಾನ್ ಹಬ್ಬವು ಮುಸ್ಲಿಮರ ಪವಿತ್ರ ಹಬ್ಬಗಳಲ್ಲಿ ಒಂದಾಗಿದೆ. ಈ ಹಬ್ಬವು ಪವಿತ್ರ ರಂಜಾನ್ ಮಾಸದ ಅಂತ್ಯವನ್ನು ಸೂಚಿಸುತ್ತದೆ. ಪರಸ್ಪರ ಶುಭಾಶಯ ವಿನಿಮಯ ಮಾಡಿದ ಬಳಿಕ ವಿಶೇಷ ಖಾದ್ಯವನ್ನು ಸವಿದು ಹಬ್ಬವನ್ನು ಆಚರಿಸುತ್ತಾರೆ. ಅಷ್ಟೇ ಅಲ್ಲದೆ ಈ ದಿನ ಬಡವರಿಗೆ ದಾನ-ಧರ್ಮವನ್ನು ಮಾಡುವುದು ಕೂಡಾ ಈ ಹಬ್ಬದ ವಿಶೇಷತೆಯಾಗಿದೆ. ಒಂದು ತಿಂಗಳ ಕಾಲ ನಡೆಸಿಕೊಂಡು ಬಂದ ರೋಜಾ ವೃತವನ್ನು ಮುಕ್ತಾಯಗೊಳಿಸಿದ ಮುಸ್ಲಿಂ ಬಂಧುಗಳು ಸೋಮವಾರ ಬೆಳಿಗ್ಗೆ ಹೊಸ ಬಟ್ಟೆ ಧರಿಸಿ ಮುಕ್ತಿಮಂದಿರ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಸೇರಿ ನವಾಜ್ ಮಾಡಿದರು.

ಈ ವೇಳೆ ಮೌಲ್ವಿ ಹಾಫೀಜ್ ಮಹ್ಮದ ಶಕೀಲ್ ಮಾತನಾಡಿ, ರಂಜಾನ್ ತಿಂಗಳಲ್ಲಿ ಉಪವಾಸ ಮಾಡುವ ಮೂಲಕ ಅಲ್ಲಾನ ಸ್ಮರಣೆ ಮಾಡುವುದು ಮುಸ್ಲಿಂರ ಪವಿತ್ರ ಕರ್ತವ್ಯಗಳಲ್ಲಿ ಒಂದಾಗಿದೆ. ಧರ್ಮ ಮಾರ್ಗದಲ್ಲಿ ಸಾಗುವ ಮೂಲಕ ಅಲ್ಲಾನ ಕೃಪೆಗೆ ನಾವೆಲ್ಲ ಪಾತ್ರರಾಗೋಣ. ಬಡವರಿಗೆ, ಅಸಹಾಯಕರಿಗೆ, ದೀನರಿಗೆ ದಾನ ಧರ್ಮ ಕಾರ್ಯ ಮಾಡುವುದು, ಸಕಲರಿಗೆ ಲೇಸನ್ನೇ ಬಯಸುವುದು ಇಸ್ಲಾಂ ಧರ್ಮದ ತತ್ವವಾಗಿದೆ ಎಂದರು.


ಬೆಳಿಗ್ಗೆ ಈದ್ಗಾ ಮೈದಾನದಲ್ಲಿ ಧರ್ಮಗುರುಗಳ ನೇತೃತ್ವದಲ್ಲಿ ಜರುಗಿದ ಪ್ರಾರ್ಥನೆಯಲ್ಲಿ ಭಾಗವಹಿಸಿದ ಜನರು ಅಲ್ಲಾಹನನ್ನು ಸ್ಮರಿಸಿದರು. ಅಪಾರ ಸಂಖ್ಯೆ ಹಿರಿಯರು, ಯುವಕರು ಮತ್ತು ಮಕ್ಕಳು ರಂಜಾನ್ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿ ಗಮನ ಸೆಳೆದರು. ಅಂಜುಮನ್ ಎ-ಇಸ್ಲಾಂ ಕಮಿಟಿ, ದೂದನಾನಾ ದರ್ಗಾ ಕಮಿಟಿ ಹಾಗೂ ಇನ್ನಿತರೆ ಮುಸ್ಲಿಂ ಸಮಾಜದ ಕಮಿಟಿಗಳ ಮುಖ್ಯಸ್ಥರು ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.

## ಜಕ್ಕಲಿಯ ಗ್ರಾಮದೇವತೆಗಳ ಜಾತ್ರೆ ಸಂಪನ್ನ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಸಮೀಪದ ಜಕ್ಕಲಿ ಗ್ರಾಮದೇವತೆಗಳ ಜಾತ್ರಾ ಉತ್ಸವ ಮೆರವಣಿಗೆಯು ರವಿವಾರ ಶ್ರದ್ಧಾ ಭಕ್ತಿಯಿಂದ ಸಕಲ ವಾದ್ಯ ವೈಭವದೊಂದಿಗೆ ವಿಜೃಂಭಣೆಯಿಂದ ಜರುಗಿತು.

ಪ್ರತಿ ಮೂರು ವರ್ಷಗಳಿಗೊಮ್ಮೆ ನಡೆಯುವ ಜಾತ್ರೆಯಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ನೂರಾರು ಮಹಿಳೆಯರು ತಮ್ಮ ಮನೆಗೆ ಪರ ಊರುಗಳಿಂದ ಆಗಮಿಸಿದ್ದ ಬೀಗರು, ಬಿಜ್ಜರೊಂದಿಗೆ ಹೊಸ ಬಟ್ಟೆ ಧರಿಸಿ ದೇವತೆಗಳಿಗೆ ನೈವೇದ್ಯ, ಹಣ್ಣು, ಕಾಯಿ, ಬಿತ್ತುವ ಬೀಜ ಉಡಿ ತುಂಬಿ ಭಕ್ತಿಯನ್ನು ಸಮರ್ಪಿಸಿದರು. ಗ್ರಾಮದೇವತೆಗಳ ಮಂಟಪದಿಂದ ಪೂಜಾ ವಿಧಿ-ವಿಧಾನದೊಂದಿಗೆ ಸಂಜೆ 6ಕ್ಕೆ ಉತ್ಸವದ ಮೆರವಣಿಗೆ ಸಾಗಿ ಶ್ರೀ ಮಾರುತೇಶ್ವರ ದೇವಸ್ಥಾನ, ಶ್ರೀ ಈಶ್ವರ ದೇವಸ್ಥಾನ, ಶ್ರೀ ಕಲ್ಮೇಶ್ವರ ದೇವಸ್ಥಾನ, ಶಿವಶರಣರಾದ ಅಣ್ಣಯ್ಯ - ತಮ್ಮಯ್ಯನವರ ಮನೆಯಿಂದ ಪೂಜೆಗೊಂಡು ಬಳಿಕ ದ್ಯಾಮಮ್ಮ ದೇವಸ್ಥಾನಕ್ಕೆ ತಲುಪಿತು.



ವಿವಿಧ ಬಗೆಯ ಹೂವಿನಿಂದ ಅಲಂಕೃತಗೊಂಡು ವಿರಾಜಮಾನರಾಗಿ ಕುಳಿತಿದ್ದ ದೇವತೆಯರು ಕಂಗೊಳಿಸಿದರು. ವಿವಿಧ ವಿಶೇಷ ಧಾರ್ಮಿಕ ಸೇವೆಗಳು, ಹರಕೆ, ಕಾಣಿಕೆಗಳನ್ನು ದೇವತೆಯರಿಗೆ ಭಕ್ತರು ಸಮರ್ಪಣೆ ಮಾಡಿದರು. ದೇವತೆಯರಿಗೆ ಸೀರೆ, ಖಣ, ಬಳೆ, ಅರಿಷಿಣಕೊಂಬು, ಕೊಬ್ಬರಿ ಬಟ್ಟಲು. ಉತ್ತತ್ತಿ, ಎಲಿ, ಅಡಿಕೆ, ಉಡಿ ತುಂಬುವ ಮೂಲಕ ದೇವತೆಗಳಲ್ಲಿ ಪ್ರಾರ್ಥಿಸಿದರು.

ಈ ಮಹೋತ್ಸವದಲ್ಲಿ ಸರ್ವ ಜಾತಿ ಜನಾಂಗದವರು , ಹಿರಿಯರು, ಯುವಕರು, ಮಹಿಳೆಯರು, ಊರಿನ ಹಾಗೂ ಸುತ್ತಮುತ್ತಲಿನ ಸಕಲ ಭಕ್ತಾದಿಗಳು ಪಾಲ್ಗೊಂಡಿದ್ದರು.

## ಆಶಾ ಕಾರ್ಯಕರ್ತೆಯರಿಂದ ವಿನೂತನ ಪ್ರತಿಭಟನೆ

■ವಿಜಯಸಾಕ್ಷಿ ಸುದ್ದಿ, ತಿರುವನಂತಪುರಂ

ಸೋಮವಾರ ಆಡಳಿತ ಮಂಡಳಿಯ ಹೊರಗೆ ನೂರಾರು ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತರು ತಮ್ಮ ಪ್ರತಿಭಟನೆಯನ್ನು ತೀವ್ರಗೊಳಿಸಿದ್ದಾರೆ. ಸರ್ಕಾರವು ತಮ್ಮ ಬೇಡಿಕೆಗಳ ಬಗ್ಗೆ ಅಸಡ್ಡೆ ತೋರುತ್ತಿದೆ ಎಂದು ಆರೋಪಿಸಿ ತಮ್ಮ ಕೂದಲು ಕತ್ತರಿಸಿಕೊಂಡರು ಮತ್ತು ಕೆಲವರು ತಲೆ ಬೋಳಿಸಿಕೊಂಡಿರುವ ಪ್ರತಿಭಟನೆ ವರದಿಯಾಗಿದೆ.

ಸೋಮವಾರ ಪ್ರತಿಭಟನೆ 50ನೇ ದಿನಕ್ಕೆ ಕಾಲಿಟ್ಟಿದೆ. ಪ್ರತಿಭಟನಾಕಾರರು ಆಡಳಿತ ಕೇಂದ್ರದ ಹೊರಗೆ ತಮ್ಮ ಪ್ರತಿಭಟನೆಯನ್ನು ತೀವ್ರಗೊಳಿಸಿದರು, ಇದು ಅವರ ಸುದೀರ್ಘ ಅಭಿಯಾನದಲ್ಲಿ ಹೊಸ ಹಂತವನ್ನು ದಾಟಿದೆ.

ಜಿಲ್ಲೆಗಳಾದ್ಯಂತದ ಹಲವಾರು ಆಶಾ ಕಾರ್ಯಕರ್ತರು ಬೆಳಿಗ್ಗೆ ಪ್ರತಿಭಟನಾ ಸ್ಥಳದಲ್ಲಿ ಒಟ್ಟುಗೂಡಿ ಸಾಮೂಹಿಕವಾಗಿ ಕೂದಲು ಕತ್ತರಿಸಿಕೊಂಡು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದಾಗ ಭಾವನಾತ್ಮಕ ದೃಶ್ಯಗಳು ತೆರೆದುಕೊಂಡವು.

ಹತಾಶೆಯ ಪ್ರದರ್ಶನದಲ್ಲಿ ಒಬ್ಬ ಪ್ರತಿಭಟನಾಕಾರಳು ಭಾವುಕಳಾಗಿ ಕಣ್ಣೀರು ಸುರಿಸುತ್ತಾ ತಲೆಯನ್ನು ಸಂಪೂರ್ಣವಾಗಿ ಬೋಳಿಸುವ ತೀವ್ರ ಹೆಜ್ಜೆ ಇಟ್ಟಳು. "ನಮ್ಮ ಬದುಕು ಕತ್ತರಿಸಲ್ಪಡುತ್ತಿದೆ. ನಮ್ಮ ನೋವು ಮತ್ತು ಸಮಸ್ಯೆಗಳಿಗೆ ಕಣ್ಣು ಮುಚ್ಚಿಕೊಂಡಿರುವ ಮಂತ್ರಿಗಳ ವಿರುದ್ಧ ನಾವು ಪ್ರತಿಭಟನೆ ನಡೆಸುತ್ತಿದ್ದೇವೆ. ದಿನಕ್ಕೆ ಕೇವಲ 232 ರೂಪಾಯಿಗಳಲ್ಲಿ ನಾವು ಹೇಗೆ ಬದುಕಬೇಕು?" ಎಂದು ಮಹಿಳೆ ಅಳುತ್ತಾ, ಕತ್ತರಿಸಿದ ಕೂದಲಿನ ಎಳೆಗಳನ್ನು ಕೈಯಲ್ಲಿ ಹಿಡಿದು-ಕೊಂಡು ಹೇಳಿದರು.

ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸಲು ನಿರಾಕರಿಸಿದರೆ, ಎಲ್ಲಾ ಪ್ರತಿಭಟನಾಕಾರರು ಇಲ್ಲಿಯೇ ಸಾಯುತ್ತಾರೆ ಎಂದು ಅವರು ಹೇಳಿದರು. "ಕಳೆದ 50 ದಿನಗಳಿಂದ ನಾವು ಬಿಸಿಲು ಮತ್ತು ಮಳೆಯನ್ನು ಲೆಕ್ಕಿಸದೆ ಪ್ರತಿಭಟನೆ ನಡೆಸುತ್ತಿದ್ದೇವೆ. ಸರ್ಕಾರ ನಮ್ಮ ಬಗ್ಗೆ ಕಾಳಜಿ ವಹಿಸಿಲ್ಲ" ಎಂದು ಅವರು ಆರೋಪಿಸಿದರು.

# ಸಂಭ್ರಮದ ರಂಜಾನ್ ಆಚರಣೆ

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಮುಸ್ಲಿಂ ಸಮುದಾಯ ದವರು ರಂಜಾನ್ ಹಬ್ಬವನ್ನು ಸೋಮವಾರ್ಸಂಭ್ರಮದಿಂದ ಆಚರಿಸಿದರು.

ಪಟ್ಟಣದ ವಿವಿಧ ಮಸೀದಿಗಳ ಮೌಲ್ವಿಗಳು ಸೇರಿದಂತೆ ಮುಸ್ಲಿಂ ಸಮುದಾಯದ ಸಾವಿರಾರು ಬಾಂಧವರು ಪಟ್ಟಣದ ಈದ್ಗಾ ಮೈದಾನದಲ್ಲಿ ಪವಿತ್ರ ರಂಜಾನ್ ನಿಮಿತ್ತ



ವಿಶೇಷ ಪ್ರಾರ್ಥನೆ ಸಲ್ಲಿಸಿ ಶುಭಾಶಯ ವಿನಿಮಯ ಮಾಡಿಕೊಂಡರು.

ಗದಗ ಯುವ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಗೌಡ ಎಚ್.ಪಾಟೀಲ್, ಇಮಾಮಸಾಬ ಶೇಖ, ತಾಜುದ್ದಿನ್ ಕಿಂಡ್ರಿ, ಎ.ಡಿ. ಮುಜಾವಾರ, ದಾವೂದ ಜಮಾಲ, ಅಲ್ಲಾಭಕ್ಷಿ ಹೊಂಬಳ, ಮನ್ಸೂರ ಹಣಗಿ, ರಿಯಾಜ ಮುಲ್ಲಾ, ಬಶೀರ ದಲೀಲ ಮುಂತಾದವರಿದ್ದರು.

### ಮಹಾದಾಸೋಹಿ ಕಲಬುರ್ಗಿ ಶರಣ ಬಸವೇಶ್ವರರ 47ನೇ ಪುರಾಣ ಮಹಾಮಂಗಲೋತ್ಸವ

# ಕಲಬುರ್ಗಿ ಶರಣರು ತ್ರಿವಿಧ ದಾಸೋಹಿಗಳು

**■ವಿಜಯಸಾಕ್ಷಿ ಸುದ್ದಿ, ಗದಗ**

ಅನ್ನ, ಅಕ್ಷರ ಹಾಗೂ ಆಶ್ರಯ ದಾಸೋಹಗಳನ್ನು ನೀಡುವ ಮೂಲಕ ದಾಸೋಹ ಪರಂಪರೆಯನ್ನು ಉತ್ತುಂಗಕ್ಕೇರಿಸಿದ ಕಲ್ಬುರ್ಗಿ ಶರಣ ಬಸವೇಶ್ವರರು ಶರಣ ಸಮುದಾಯದಲ್ಲಿಯೇ ಶ್ರೇಷ್ಠ ಶರಣರಾಗಿದ್ದರು. ಅವರ ದಾಸೋಹ ಸೇವೆಯನ್ನು ಜೀವಿತಾವಧಿಯ ನಂತರವೂ ನಿರಂತರವಾಗಿ ನಡೆಸುವ ವಿಶೇಷ ಶಕ್ತಿಯನ್ನು ಹೊಂದಿರುವ ಶ್ರೇಷ್ಠ ಶರಣರು ಅವರಾಗಿದ್ದರು ಎಂದು ನವಲಗುಂದ ಗವಿಮಠದ ಬಸವಲಿಂಗ ಮಹಾಸ್ವಾಮೀಜಿಗಳು ವರ್ಣಿಸಿದರು.



ನಗರದ ಶ್ರೀ ಕಟ್ಟಿ ಬಸವೇಶ್ವರ ಸಮುದಾಯ ಭವನ ಟ್ರಸ್ಟ್ ಹಾಗೂ ಕಟ್ಟಿ ಬಸವೇಶ್ವರ ದೇವಸ್ಥಾನ ಸಹಯೋಗದಲ್ಲಿ ನಡೆದ ಮಹಾದಾಸೋಹಿ ಕಲಬುರ್ಗಿ ಶರಣ ಬಸವೇಶ್ವರರ 47ನೇ ಪುರಾಣ ಮಹಾಮಂಗಲೋತ್ಸವ ಧಾರ್ಮಿಕ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸ್ಯಿವರು ಆಶೀರ್ವಚನ ನೀಡಿದರು.

ಕಲಬುರ್ಗಿ ಶರಣ ಬಸವೇಶ್ವರರು ತ್ರಿವಿಧ ದಾಸೋಹ ಸೇವೆಗೆ ಹೆಸರುವಾಸಿಯಾಗಿದ್ದರು. ಅವರ ನಿರಂತರ ದಾಸೋಹ ಸೇವೆಯನ್ನು ಸ್ಮರಿಸಿ ಜಗತ್ತಿಗೆ ಪರಿಚಯಿಸುವ ಪ್ರಮುಖ ಉದ್ದೇಶದಿಂದ ಕಳೆದ 47 ವರ್ಷಗಳಿಂದ ಶ್ರೀ ಕಟ್ಟಿ ಬಸವೇಶ್ವರ ಸಮುದಾಯ ಭವನ ಟ್ರಸ್ಟ್ ಹಾಗೂ ಕಟ್ಟಿ ಬಸವೇಶ್ವರ ದೇವಸ್ಥಾನ ಪುರಾಣ ಪ್ರವಚನ ಧಾರ್ಮಿಕ ಕಾರ್ಯಕ್ರಮ ಯಶಸ್ವಿಯಾಗಿ ನಡೆಸುತ್ತಿರುವದು ಶ್ಲಾಘನೀಯ ಸಂಗತಿಯಾಗಿದೆ ಎಂದರು.

ಗದಗ ಜಿಲ್ಲಾ ವೀರಶೈವ ಮಹಾಸಭಾ ಅಧ್ಯಕ್ಷರಾದ ಶರಣ ಬಸಪ್ಪ ಗುಡಿಮನಿ, ಕಳೆದ 47 ವರ್ಷಗಳಿಂದ ಈ ಭಾಗದಲ್ಲಿ ಕಲಬುರ್ಗಿ ಶರಣ ಬಸವೇಶ್ವರರ ಪುರಾಣ ಪ್ರವಚನವನ್ನು ಯಶಸ್ವಿಗೊಳಿಸುವಲ್ಲಿ ಹಿರಿಯರ ಮಾರ್ಗದರ್ಶನ ಮತ್ತು ಯುವಕರ ಶ್ರಮ ಅಡಗಿದೆ. ಮಕ್ಕಳಿಗೆ ಶಿಕ್ಷಣ ಜೊತೆಗೆ ಉತ್ತಮ ಸಂಸ್ಕಾರ ಕಲಿಸಿ ಅವರ ವ್ಯಕ್ತಿತ್ವವನ್ನು ರೂಪಿಸಬೇಕೆಂದು ಕರೆ ನೀಡಿದರು.

ಶ್ರೀ ಕಟ್ಟಿ ಬಸವೇಶ್ವರ ಸಮುದಾಯ ಭವನ ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ ರಂಗಪ್ಪ ಹೂಗಾರ ಮಾತನಾಡಿ, ಕಲಬುರ್ಗಿ ಶರಣ ಬಸವೇಶ್ವರರ ಕೃಪೆಯಿಂದಾಗಿಯೇ ಸುದೀರ್ಘ ವರುಷಗಳ ಕಾಲ ಯಶಸ್ವಿಯಾಗಿ ಪುರಾಣ ಪ್ರವಚನ ಧಾರ್ಮಿಕ ಕಾರ್ಯಕ್ರಮವನ್ನು ನಿರ್ವಹಣೆ ಮಾಡಲಾಗಿದೆ. ಈ ಧಾರ್ಮಿಕ ಕಾರ್ಯಕ್ರಮ ಯಶಸ್ವಿಯಾಗುವಲ್ಲಿ ಸಮಯ, ಶ್ರಮ ನೀಡಿದ ಶ್ರೀ ಕಟ್ಟಿ ಬಸವೇಶ್ವರ ಸಮುದಾಯ ಭವನ ಟ್ರಸ್ಟ್ ಹಾಗೂ ಕಟ್ಟಿ ಬಸವೇಶ್ವರ ದೇವಸ್ಥಾನದ ಪದಾಧಿಕಾರಿಗಳು, ಹಿರಿಯರು, ಯುವಕರು ಹಾಗೂ ಸದ್ಭಕ್ತರಿಗೆ ಅಭಿನಂದನೆ ಸಲ್ಲಿಸಿದರು.

ಪುರಾಣ ಪ್ರವಚನ ನೀಡಿದ ಶ್ರೀ ವೀರೇಶ್ವರ ಪುಣ್ಯಾಶ್ರಮದ ಬಸಯ್ಯ ಶಾಸ್ತ್ರೀ ಹಿರೇಮಠ, ಸಂಗೀತ ಸೇವೆ ನೀಡಿದ ಜಗನ್ನಾಥ ಶಿಂಧಗಿ, ತಬಲಾ ವಾದಕ ರತನ ಸೇಡಂ, ಗದಗ ಜಿಲ್ಲಾ ವೀರಶೈವ ಮಹಾಸಭಾ ಅಧ್ಯಕ್ಷರಾದ ಶರಣ ಬಸಪ್ಪ ಗುಡಿಮನಿ ಹಾಗೂ ನಗರಸಭಾ ಸದಸ್ಯ ಚಂದ್ರು ತಡಸದ ಅವರನ್ನು ನವಲಗುಂದ ಗವಿಮಠದ ಬಸವಲಿಂಗ ಮಹಾಸ್ವಾಮಿಗಳು ಸನ್ಮಾನಿಸಿ, ಗೌರವಿಸಿದರು.

ಶ್ರೀ ಕಟ್ಟಿ ಬಸವೇಶ್ವರ ಸಮುದಾಯ ಭವನ ಟ್ರಸ್ಟ್ ಅಧ್ಯಕ್ಷರಾದ ಮಲ್ಲಿಕಾರ್ಜುನ ರಂಗಪ್ಪ ಹೂಗಾರ, ಶಂಭು ಕಾರದಕಟ್ಟಿ, ಭೀಮರೆಡ್ಡಿ ಕಿಲುಬನವರ, ಸಂತೋಷ ಕುಡತರಕರ, ನರಸಿಂಹ ಕುಡತರಕರ, ಮುತ್ತು ಕಾರದಕಟ್ಟಿ, ಸಿ.ಬಿ. ಟೋಪಗಿ, ಪುರಾಣ ಸಮಿತಿಯ ಪದಾಧಿಕಾರಿಗಳಾದ ಮಾರುತಿ ಮದಗುಣಕಿ, ಶಿವನಗೌಡ ಆಡೂರು, ಕಿರಣ ಗಡಾದ, ವಿರೇಂದ್ರ ಮಣ್ಣನವರ, ಗಂಗಾಧರ ಗಡಾದ, ಶಂಕರ ಗಡಾದ ಸೇರಿದಂತೆ ಸದ್ಭಕ್ತರಿದ್ದರು.

ಬಸವರಾಜ ಯಲಬುರ್ಗಿ ಧಾರ್ಮಿಕ ಕಾರ್ಯಕ್ರಮವನ್ನು ನಿರೂಪಿಸಿದರು.

> ನಗರಸಭಾ ಸದಸ್ಯ ಚಂದ್ರು ತಡಸದ ಮಾತನಾಡಿ, ಶಹಪೂರ ಪೇಟೆಯ ಹಿರಿಯರು ಕಲಬುರ್ಗಿ ಶರಣ ಬಸವೇಶ್ವರರ ಪುರಾಣ ಪ್ರವಚನ ಧಾರ್ಮಿಕ ಕಾರ್ಯಕ್ರಮದ ಮುನ್ನುಡಿ ಬರೆದಿದ್ದಾರೆ. ಕಲಬುರ್ಗಿ ಶರಣ ಬಸವೇಶ್ವರರು ತಮ್ಮ ದಾಸೋಹ ಸೇವೆಯ ಮೂಲಕ ದಾಸೋಹ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ. ಅವರು ಅನ್ನ, ಅಕ್ಷರ ಹಾಗೂ ಆಶ್ರಯ ಸೇವೆಯ ಮೂಲಕ ಜನಮನ್ನಣೆ ಪಡೆದಿದ್ದರು. ಇಂದಿಗೂ ಅವರ ದಾಸೋಹ ಸೇವೆ ಜೀವಂತವಾಗಿದೆ ಎಂದು ಸ್ಮರಿಸಿದರು.

# ಉತ್ತಮ ಆರೋಗ್ಯಕ್ಕೆ ಮನೆ ಆಹಾರ ಅವಶ್ಯ

**■ವಿಜಯಸಾಕ್ಷಿ ಸುದ್ದಿ, ಮುಳಗುಂದ**

ಉತ್ತಮ ಆರೋಗ್ಯಕ್ಕೆ ಮನೆಯ ಆಹಾರ ತುಂಬಾ ಅವಶ್ಯಕ ಎಂದು ಧಾರವಾಡ ಬಸವಾನಂದ ಮಾಹಾಸ್ವಾಮಿಗಳು ಹೇಳಿದರು.




ಅವರು ಪಟ್ಟಣದ ಸಿದ್ದೇಶ್ವರ ಜಾತ್ರಾ ಮಹೋತ್ಸವ ಅನುಭಾವ ಗೋಷ್ಠಿಯಲ್ಲಿ ಉಪನ್ಯಾಸ ನೀಡಿ, ಆಧುನಿಕತೆ ಬೆಳೆದಂತೆಲ್ಲಾ ಇಂದು ಆಹಾರ ಪದ್ಧತಿ ಬದಲಾಗುತ್ತಿದ್ದು, ಇದರಿಂದ ನಿತ್ಯ ಹತ್ತು ಹಲವಾರು ರೋಗಗಳಿಂದ ಬಳಲುತ್ತಿದ್ದೇವೆ. ನಾವು ಉತ್ತಮ ಆರೋಗ್ಯ ಹೊಂದಲು ಸಿರಿಧಾನ್ಯಗಳನ್ನು ನಿತ್ಯ ಜೀವನದಲ್ಲಿ ಬಳಕೆ ಮಾಡಬೇಕು. ಇದರಿಂದ ಉತ್ತಮ ಆರೋಗ್ಯ ಹೊಂದಲು ಸಹಕಾರಿಯಾಗುತ್ತದೆ ಎಂದರು.

ಗದಗ ಜಿಮ್ಸ್ ನಿರ್ದೇಶಕ ಡಾ. ಬಸವರಾಜ ಬೊಮ್ಮನಹಳ್ಳಿ ಮಾತನಾಡಿ, ಆಧುನಿಕತೆ ಬೆಳೆದಂತೆ ಐತಿಹಾಸಿಕ ಪರಂಪರೆ, ಸಂಸ್ಕೃತಿ, ಸಂಸ್ಕಾರ ಮರೆಯುತ್ತಿದ್ದೇವೆ. ಅವುಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಮುಳಗುಂದ ಸಿದ್ದೇಶ್ವರ ದೇವಸ್ಥಾನ ಐತಿಹಾಸಿಕ ಹಿನ್ನೆಲೆ ಹೊಂದಿದ್ದು, ಇಂತಹ ದೇವಸ್ಥಾನದ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯುತ್ತಿರುವುದು ಶ್ಲಾಘನೀಯ ಎಂದರು.

ಅನುಭಾವ ಗೋಷ್ಠಿಯ ಸಾನ್ನಿಧ್ಯವನ್ನು ಮುಳಗುಂದ ಗವಿಮಠದ ಮಲ್ಲಿಕಾರ್ಜುನ ಮಾಹಾಸ್ವಾಮೀಜಿ, ಸಮ್ಮುಖವನ್ನು ನೀಲಗುಂದ ಗುದ್ನೇಶ್ವರಮಠದ ಪ್ರಭುಲಿಂಗ ದೇವರು ಪಾಲ್ಗೊಂಡಿದ್ದರು. ಧಾರವಾಡದ ಬಸವಾನಂದ ಮಾಹಾಸ್ವಾಮಿಗಳು ಉಪನ್ಯಾಸ ನೀಡಿದರು. ಅಧ್ಯಕ್ಷತೆಯನ್ನು ಎಸ್.ಎಂ. ನೀಲಗುಂದ ವಹಿಸಿದ್ದರೆ, ಕಾರ್ಯಕ್ರಮವನ್ನು ಗೌರಮ್ಮಾ ಬಡ್ನಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಕಾಶೀನಾಥ ಮರಿದೇವರಮಠ, ಎಂ.ಡಿ. ಬಟ್ಟೂರ, ಡಾ. ಎಸ್.ಸಿ. ಚವಡಿ, ರಾಮಣ್ಣಾ ಕಮಾಜಿ, ಅಶೋಕ ಸೋನಗೋಜಿ, ನಾಗರಾಜ ದೇಶಪಾಂಡೆ, ಇಮ್ಮಣ್ಣ ಚವಳಿಕಾಯಿ, ಫಕ್ಕೀರಯ್ಯ ಅಮೋಘಿಮಠ, ಮಹಾಂತಪ್ಪ ನೀಲಗುಂದ, ಮಹಾದೇವಪ್ಪ ಹುಬ್ಬಳ್ಳಿ, ಚಂಬಣ್ಣಾ ಲಕ್ಷ್ಮೇಶ್ವರ, ಗುರಣ್ಣಾ ಜವಳಿಶೆಟ್ರ, ಹೊನ್ನಪ್ಪ ಜೋಗಿ, ಮರಿಯಪ್ಪ ನಡಗೇರಿ, ಎ.ಡಿ. ಮುಜಾವಾರ, ಎಂ.ಎಂ. ಜಮಾಲಸಾಬಮವರ ಪಾಲ್ಗೊಂಡಿದ್ದರು.

# ಕಪ್ಪು ಪಟ್ಟಿ ಧರಿಸಿ ಪ್ರಾರ್ಥನೆ

**■ವಿಜಯಸಾಕ್ಷಿ ಸುದ್ದಿ, ರೋಣ**

ಕೇಂದ್ರ ಸರ್ಕಾರ ವಕ್ಫ್ ತಿದ್ದುಪಡಿ ಮಸೂದೆ ಜಾರಿಗೊಳಿಸುತ್ತಿರುವುದನ್ನು ವಿರೋಧಿಸಿ ರೋಣ ಪಟ್ಟಣದ ಅಂಜುಮನ್ ಪ್ರೌಢಶಾಲೆಯ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಕಪ್ಪು ಪಟ್ಟಿ ಧರಿಸಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವದರೊಂದಿಗೆ, ಕೇಂದ್ರ ಸರ್ಕಾರದ ಧೋರಣೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.



ಈ ವೇಳೆ ಅಂಜುಮನ್ ಇಸ್ಲಾಂ ಕಮಿಟಿ ಅಧ್ಯಕ್ಷ ಬಾವಾಸಾಬ ಬೆಟಗೇರಿ ಮಾತನಾಡಿ, ವಕ್ಫ್ ತಿದ್ದುಪಡಿ ಮಸೂದೆ ಜಾರಿ ಮಾಡುವುದು ಮುಸ್ಲಿಂ ಜನಾಂಗಕ್ಕೆ ಮಾರಕವಾಗಲಿದೆ. ದೇಶದಲ್ಲಿ ಎಲ್ಲ ಸಮುದಾಯದವರಿಗೂ ಅವರದ್ದೇ ಆದ ಹಬ್ಬ, ಆಚರಣೆ, ಪೂಜೆ, ನಮಾಜ್ ಮಾಡುವ ಹಕ್ಕನ್ನು ಕಾನೂನಿನಲ್ಲಿ ನೀಡಲಾಗಿದೆ. ಆದರೆ ಈಗಿನ ಕೇಂದ್ರ ಸರ್ಕಾರ ಸಮಾಜದಲ್ಲಿ ಶಾಂತಿ ಭಂಗ ಮಾಡುವ ಜನ ವಿರೋಧಿ ಕಾನೂನುಗಳನ್ನು ರೂಪಿಸಲು ಮುಂದಾಗಿದ್ದು, ಇದನ್ನು ನಾವು ಬಲವಾಗಿ ಖಂಡಿಸುತ್ತೇವೆ. ವಕ್ಫ್ ತಿದ್ದುಪಡಿ ಮಸೂದೆ ದ್ವೇಷಪೂರಿತ ಕಾನೂನಾಗಿದೆ. ಯಾವದೇ ಕಾರಣಕ್ಕೂ ವಕ್ಫ್ ತಿದ್ದುಪಡಿ ಮಸೂದೆ ಜಾರಿಗೆ ತರಬಾರದು ಎಂದು ಆಕ್ರೋಶ ವ್ಯಕ್ತಪಡಿಸಿದರು.


ಈ ವೇಳೆ ಅಂಜುಮನ್ ಇಸ್ಲಾಂ ಕಮಿಟಿ ಕಾರ್ಯದರ್ಶಿ ಅಬ್ದುಲ್‌ರೇಮಾನ್ ಸೈಯದ್, ಯೂಸೂಫ್ ಇಟಗಿ, ಅಪ್ತಾಬ ಅಹ್ಮದ ತಹಸೀಲ್ದಾರ, ಬವಾಸಾಬ ಚಿನ್ನೂರ, ಕಲೀಲ ಅಹ್ಮದ ರಾಮದುರ್ಗ, ಮಲೀಕ ಯಲಿಗಾರ, ಶಫೀಕ ಮೂಗನೂರ, ಶಬ್ಬೀರ ಖಾಜಿ, ಎ.ಎಸ್. ಖತೀಬ, ಮುಸ್ತಾಕ ಅತ್ತಾರ, ದಾವಲಸಾಬ ಬಾಡಿನ, ಅಬ್ಬು ಹೊಸೂರ, ಪೀರಸಾಬ ಮಾರನಬಸರಿ, ಮಾಬುಸಾಬ ಮುಜಾವರ ಮುಂತಾದವರು ಭಾಗವಹಿಸಿದ್ದರು.

### ಹವಾಮಾನ ಇಲಾಖೆ ಕೊಟ್ಟ ಸೂಚನೆ

# ಜೂನ್‌ವರೆಗೆ ಬಿಸಿಲಿಗೆ ಮೈಯೊಡ್ಡುವ ಮುನ್ನ ಎಚ್ಚರ!

**■ವಿಜಯಸಾಕ್ಷಿ ಸುದ್ದಿ, ನವದೆಹಲಿ**

ಎಪ್ರಿಲ್‌ನಿಂದ ಜೂನ್ ವರೆಗೆ ಬಿಸಿಲಿನ ಪ್ರಮಾಣ ಹೆಚ್ಚಳವಾಗಲಿದ್ದು, ಈ ಬಗ್ಗೆ ಭಾರತೀಯ ಹವಾಮಾನ ಇಲಾಖೆ ಜನರಿಗೆ ಎಚ್ಚರಿಕೆ ಕೊಟ್ಟಿದೆ.



ಭಾರತ ಹವಾಮಾನ ಇಲಾಖೆ ಎಪ್ರಿಲ್ ಮತ್ತು ಜೂನ್ ನಡುವೆ ಭಾರತದಲ್ಲಿ ಬೇಸಿಗೆಯ ಬಿಸಿಲಿನ ಸ್ಥಿತಿಯ ಬಗ್ಗೆ ಎಚ್ಚರಿಸಿದೆ. ಹೀಗಾಗಿ, ಇಂದಿನಿಂದ ಜೂನ್ ತಿಂಗಳವರೆಗೆ ದೇಶದಲ್ಲಿ ಶಾಖದ ಅಲೆಯ ದಿನಗಳು ಬಹುತೇಕ ದ್ವಿಗುಣಗೊಳ್ಳುತ್ತವೆ.

“ಎಪ್ರಿಲ್‌ನಿಂದ ಜೂನ್‌ವರೆಗೆ, ಉತ್ತರ ಮತ್ತು ಪೂರ್ವ ಭಾರತದ ಹೆಚ್ಚಿನ ಭಾಗಗಳು, ಮಧ್ಯ ಭಾರತ ಮತ್ತು ವಾಯುವ್ಯ ಭಾರತದ ಬಯಲು ಪ್ರದೇಶಗಳು ಸಾಮಾನ್ಯಕ್ಕಿಂತ ಎರಡರಿಂದ ನಾಲ್ಕು ಹೆಚ್ಚು ಶಾಖದ ಅಲೆಯ ದಿನಗಳನ್ನು ಅನುಭವಿಸುವ ನಿರೀಕ್ಷೆಯಿದೆ” ಎಂದು ಹವಾಮಾನ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ. ಸಾಮಾನ್ಯವಾಗಿ, ಈ ಅವಧಿಯಲ್ಲಿ ಭಾರತವು 4ರಿಂದ 7 ಶಾಖದ ಅಲೆಯ ದಿನಗಳನ್ನು ದಾಖಲಿಸುತ್ತದೆ. ಆದರೆ ಮುಂಬರುವ ಬೇಸಿಗೆಯಲ್ಲಿ ಹಲವಾರು ಪ್ರದೇಶಗಳಲ್ಲಿ ಆ ಸಂಖ್ಯೆಯು ದ್ವಿಗುಣಗೊಳ್ಳಬಹುದು ಎನ್ನಲಾಗಿದೆ.

ತೀವ್ರ ಶಾಖದ ಹೊರೆಯನ್ನು ಭರಿಸುವ ನಿರೀಕ್ಷೆಯಿರುವ ರಾಜ್ಯಗಳಲ್ಲಿ ರಾಜಸ್ಥಾನ, ಗುಜರಾತ್, ಹರಿಯಾಣ, ಪಂಜಾಬ್, ಮಧ್ಯಪ್ರದೇಶ, ಮಹಾರಾಷ್ಟ್ರ, ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳ, ಒಡಿಶಾ, ಛತ್ತೀಸ್‌ಗಢ, ತೆಲಂಗಾಣ, ಆಂಧ್ರಪ್ರದೇಶ ಮತ್ತು ಉತ್ತರ ಕರ್ನಾಟಕ ಮತ್ತು ತಮಿಳುನಾಡಿನ ಕೆಲವು ಭಾಗಗಳು ಸೇರಿವೆ. ಎಪ್ರಿಲ್‌ನಲ್ಲಿ ಹೆಚ್ಚಿನ ಪ್ರದೇಶಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಗರಿಷ್ಠ ತಾಪಮಾನ ಕಂಡುಬರುವ ಸಾಧ್ಯತೆಯಿದೆ.

ಹೆಚ್ಚುತ್ತಿರುವ ತಾಪಮಾನವು ವಿದ್ಯುತ್ ಬೇಡಿಕೆಯ ಮೇಲೆ ಪರಿಣಾಮ ಬೀರುತ್ತದೆ. ನಿರೀಕ್ಷಿತ ಶಾಖದ ಉಲ್ಬಣದೊಂದಿಗೆ ತಜ್ಞರು ವಿದ್ಯುತ್ ಬೇಡಿಕೆಯಲ್ಲಿ ಅನುಗುಣವಾದ ಏರಿಕೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

# ಮಾಸಿಕ ಜ್ಞಾನಾಮೃತ ಕಾರ್ಯಕ್ರಮ ಇಂದು

**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಸಂಭಾಪೂರ ರಸ್ತೆಯಲ್ಲಿರುವ ಶ್ರೀ ಜಗದ್ಗುರು ಪಂಚಾಚಾರ್ಯ ವೇದ ಸಂಸ್ಕೃತ ಪಾಠಶಾಲೆಯ ಆವರಣದ ಶ್ರೀ ಕಾಶೀ ವಿಶ್ವನಾಥನ ಸನ್ನಿಧಿಯಲ್ಲಿ 184ನೇ ಮಾಸಿಕ ಶ್ರೀ ಸಿದ್ಧಾಂತ ಶಿಖಾಮಣಿ ಜ್ಞಾನಾಮೃತ ಕಾರ್ಯಕ್ರಮವು ಎಪ್ರಿಲ್ 1ರಂದು ಸಾಯಂಕಾಲ 6.30 ಕ್ಕೆ ನಡೆಯಲಿದೆ.

ಪ್ರಾತಃಕಾಲದಲ್ಲಿ ಪಾಠಶಾಲಾ ಸರ್ವ ವಿದ್ಯಾರ್ಥಿಗಳಿಂದ ಶ್ರೀ ಕಾಶೀ ವಿಶ್ವನಾಥನಿಗೆ ಮಹಾ ರುದ್ರಾಭಿಷೇಕ, ಫಲಪಂಚಾಮೃತ ಅಭಿಷೇಕ, ಕ್ಷೀರಾಭಿಷೇಕ, ಮಹಾಮಂಗಳಾರುತಿ ಪೂಜಾ ಕಾರ್ಯಕ್ರಮಗಳು ನಡೆಯಲಿವೆ.

ಸಾಯಂಕಾಲ ಜ್ಞಾನಾಮೃತ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಬೃಹನ್ಮಠದ ಶ್ರೀ ಷ.ಬ್ರ. ಅಭಿನವ ಪಂಚಾಕ್ಷರ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿಕೊಳ್ಳಲಿದ್ದಾರೆ. ಅಧ್ಯಕ್ಷತೆಯನ್ನು ಜ್ಞಾನಾಮೃತ ಸಮಿತಿಯ ಅಧ್ಯಕ್ಷ ಎಸ್.ಎಸ್. ಮೇಟಿ ವಹಿಸಿಕೊಳ್ಳಲಿದ್ದಾರೆ. ಗುರುರಕ್ಷಾ ಆಶಿರ್ವಾದವನ್ನು ಸಂಗೀತಾ ಭರಮಗೌಡರ ಪಡೆದುಕೊಳ್ಳಲಿದ್ದಾರೆ. ಕವಿತಾ ಬಸವರಾಜ ದಂಡಿನ ಉಪನ್ಯಾಸವನ್ನು ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಎಲ್.ಪಿ. ಕಂಬಿ, ನಾಗರತ್ನಾ ಜಗದೀಶ್ವರಯ್ಯ ಹುಬಳ್ಳಿಮಠ ಹಾಗೂ ಕಾಶೀ ಪೀಠದ ರುದ್ರಬಳಗದ ತಾಯಂದಿರು ಭಾಗವಹಿಸುವರು.

ಕಾರ್ಯಕ್ರಮದ ಭಕ್ತಿಸೇವೆಯನ್ನು ಶಿವಲಿಂಗಮ್ಮ ತಾವರಗೇರಿಮಠ ಕುಟುಂಬವರ್ಗದವರು ವಹಿಸಿಕೊಂಡಿದ್ದಾರೆ. ಸರ್ವ ಸದ್ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿಶ್ವನಾಥನ ಕೃಪಾಶಿರ್ವಾದಕ್ಕೆ ಪಾತ್ರರಾಗಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದೆ.

# ಯುಗಾದಿ, ರಂಜಾನ್ ಪುಣ್ಯದ ಪ್ರತಿಫಲ

**■ವಿಜಯಸಾಕ್ಷಿ ಸುದ್ದಿ, ರೋಣ**

ಯುಗಾದಿ ಹಾಗೂ ರಂಜಾನ್ ಹಬ್ಬಗಳು ಏಕ ಕಾಲದಲ್ಲಿ ಬಂದಿರುವುದು ಮಾನವ ಜನ್ಮದ ಪುಣ್ಯದ ಪ್ರತಿಫಲವಾಗಿದೆ ಎಂದು ಮೌಲಾನ ಮಲೀಕ್ ಹೇಳಿದರು.



ಅವರು ಸೋಮವಾರ ಮಾರನಬಸರಿ ಗ್ರಾಮದಲ್ಲಿ ಜರುಗಿದ ರಂಜಾನ್ ಹಬ್ಬದ ಸಾಮೂಹಿಕ ಪ್ರಾರ್ಥನೆಯ ನೇತೃತ್ವವನ್ನು ವಹಿಸಿ ಮಾತನಾಡಿದರು.

ನಮ್ಮದು ಹಲವು ಧರ್ಮಗಳ, ಹಲವು ಭಾಷೆಗಳ ಇತಿಹಾಸವನ್ನು ಹೊಂದಿರುವ ಸುಂದರ ಹಾಗೂ ಸಹೋದರತೆಯ ದೇಶವಾಗಿದೆ. ಎಲ್ಲ ಹಬ್ಬಗಳನ್ನು ಎಲ್ಲರೂ ಸೇರಿಕೊಂಡು ಆಚರಿಸಿದಾಗ ನೀಜವಾದ ಅರ್ಥ ಬರುತ್ತದೆ ಎಂದರು.

ತಿಂಗಳ ಕಾಲ ಉಪವಾಸವನ್ನು ನೆರವೇರಿಸಿ ಧರ್ಮದ ಹಾದಿಯಲ್ಲಿ ಸಾಗಿರುವ ಮುಸ್ಲಿಂ ಬಂಧುಗಳು ಬಡವರ ಬಗ್ಗೆ ಕಾಳಜಿಯನ್ನು ವಹಿಸಬೇಕು. ಸರ್ವ ಧರ್ಮದ ಸಮಾಜದ ಬಂಧುಗಳು ಸಹೋದರೆತೆಯನ್ನು ಬೆಳೆಸಿಕೊಳ್ಳಬೇಕು. ಇಸ್ಲಾಂ ಧರ್ಮ ಶಾಂತಿಯನ್ನು ಪ್ರತಿಪಾದಿಸುವ ಧರ್ಮವಾಗಿದ್ದು, ಇದನ್ನು ಸಮಾಜದ ಬಂಧುಗಳು ಅರ್ಥ ಮಾಡಿಕೊಳ್ಳಬೇಕು. ಧರ್ಮದ ಜೊತೆಗೆ ಮಕ್ಕಳ ಅಕ್ಷರ ಜ್ಞಾನಕ್ಕೆ ಹೆಚ್ಚಿನ ಮಹತ್ವ ನಿಡಬೇಕು ಎಂದರು.

ರೋಣ, ಹೊಸಳ್ಳಿ, ನಿಡಗುಂದಿ, ಕಳಕಾಪೂರ, ಇಟಗಿ, ಹಿರೇಹಾಳ, ಕೊತಬಾಳ, ಸವಡಿ, ಅಬ್ಬಿಗೇರಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಮುಸ್ಲಿಂ ಬಂಧುಗಳು ರಂಜಾನ್ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಕಾಶೀಮಸಾಬ ದೋಟಿಹಾಳ, ಜಿ.ಪಂ ಮಾಜಿ ಉಪಾಧ್ಯಕ್ಷ ಎಸ್.ಎಚ್. ಹಾದಿಮನಿ, ತಾ.ಪಂ ಮಾಜಿ ಸದಸ್ಯ ಅಂದಪ್ಪ ಬಿಚ್ಚೂರ, ರೈಮಾನಸಾಬ ಮೋತೆಖಾನ್, ಗ್ರಾ.ಪಂ ಅಧ್ಯಕ್ಷ ವೀರಣ್ಣ ಮರಡಿ, ನಬಿಸಾಬ ಹುಡೇದ, ಖಾದಿರಸಾಬ ಕಳಕಾಪೂರ, ಸಂಗಪ್ಪ ಮೆಣಸಿನಕಾಯಿ, ಮಲ್ಲು ಮಾದರ, ಶಿವು ಜುಮ್ಮನಗೌಡರ, ಇಸ್ಮಾಹಿಲ್ ಹೊರಪೇಟಿ, ಪಕ್ಕಿರಪ್ಪ ಕುಕನೂರ, ಚಂದ್ರು ಮಾರನಬಸರಿ, ಶ್ರೀಕಾಂತ ಕುಲಕರ್ಣಿ, ರಿಯಾಜ ಆಲೂರ, ಡಿ.ಡಿ. ದೋಟಿಹಾಳ, ಅಲ್ಲಾಸಾಬ ಮೋತೆಖಾನ್, ಮಹ್ಮದ ಸವಡಿ, ಪಕ್ರುಸಾಬ ಹಜರತನವರ, ಮೌಲಾಸಾಬ ಸವಡಿ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

# ಸಚಿವ ಎಚ್.ಕೆ. ಪಾಟೀಲರಿಂದ ರಂಜಾನ್ ಶುಭಾಶಯ

**■ವಿಜಯಸಾಕ್ಷಿ ಸುದ್ದಿ, ಗದಗ**

ಮುಸ್ಲಿಂ ಬಾಂಧವರ ಪವಿತ್ರ ಹಬ್ಬವಾದ ಕುತುಬ್ ಎ ರಂಜಾನ್ ಹಬ್ಬದ ನಿಮಿತ್ತ ಡಂಬಳ ನಾಕಾದ ಹತ್ತಿರವಿರುವ ಈದ್ಗಾ ಮೈದಾನದಲ್ಲಿ ಎಲ್ಲ ಮುಸ್ಲಿಂ ಬಾಂಧವರು ಭಕ್ತಿಯಿಂದ ಪ್ರಾರ್ಥನೆಯನ್ನು ಸಲ್ಲಿಸಿದರು. ಗದಗ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಸದಸ್ಯರು, ಗದಗ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಡಾ. ಕಿಶೋರಬಾಬು ಜೆ. ನಾಗರಕಟ್ಟಿಯವರು ತಮ್ಮ ಪರಿವಾರ ಹಾಗೂ ಸ್ನೇಹಿತರೊಂದಿಗೆ ಪ್ರಾರ್ಥನೆ ಸಲ್ಲಿಸಿ, ಕಾನೂನು, ಸಂಸದೀಯ ವ್ಯವಹಾರ, ಪ್ರವಾಸೋದ್ಯಮ ಸಚಿವರಾದ ಎಚ್.ಕೆ. ಪಾಟೀಲರೊಂದಿಗೆ ಹಬ್ಬದ ಶುಭಾಶಯವನ್ನು ವಿನಿಮಯ ಮಾಡಿಕೊಂಡರು.



ಈ ವೇಳೆ ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ, ಗ್ಯಾರಂಟಿ ಸಮಿತಿಯ ಅಧ್ಯಕ್ಷ ಬಿ.ಬಿ. ಅಸೂಟಿ, ಅಂಜುಮನ್ ಇಸ್ಲಾಂ ಸಂಸ್ಥೆಯ ಮಾಜಿ ಅಧ್ಯಕ್ಷ ಸಾದಿಕ ನರಗುಂದ, ಪ್ರಾಚ್ಯವಸ್ತು ಶಾಸ್ತ್ರಜ್ಞರಾದ ಅ.ದ. ಕಟ್ಟಿಮನಿ, ಫಾರೂಕ ಹುಬ್ಬಳ್ಳಿ ಮುಂತಾದವರು ಉಪಸ್ಥಿತರಿದ್ದರು.

# ಸರ್ಕಾರಕ್ಕೆ ಸೆಡ್ಡು ಹೊಡೆದ ಹಾವೇರಿ ಜಿಲ್ಲಾ ಹಾಲು ಒಕ್ಕೂಟ: ಹಾಲಿನ ದರ 3.50 ರೂ. ಇಳಿಕೆ!



**■ವಿಜಯಸಾಕ್ಷಿ ಸುದ್ದಿ, ಹಾವೇರಿ**

ರಾಜ್ಯ ಸರ್ಕಾರದ ಹಾಲಿನ ದರ ಏರಿಕೆಗೆ ಹಾವೇರಿ ಜಿಲ್ಲಾ ಹಾಲು ಒಕ್ಕೂಟ ಸೆಡ್ಡು ಹೊಡೆದಿದೆ. ಈ ಮೂಲಕ ಹಾಲಿನ ದರ 3.50 ರೂ. ಇಳಿಕೆ ಮಾಡಿದೆ.ರಾಜ್ಯದಲ್ಲಿ ಸರ್ಕಾರ ಪ್ರತಿ ಲೀಟರ್ ಹಾಲಿಗೆ 4 ರೂ. ಏರಿಕೆ ಮಾಡಿ ಗ್ರಾಹಕರಿಗೆ ಶಾಕ್ ನೀಡಿತ್ತು. ಎಪ್ರಿಲ್ 1 ರಿಂದ ಪ್ರತಿ ಲೀಟರ್‌ಗೆ 4 ರೂಪಾಯಿ ಹೆಚ್ಚಿಸಲು ಕೆಎಂಎಫ್ ನಿರ್ಧಾರ ಮಾಡಿದೆ. ಆದರೆ ಹಾವೇರಿ ಹಾಲು ಒಕ್ಕೂಟ ಮಾತ್ರ ಲೀಟರ್ ಹಾಲಿಗೆ 3.50 ರೂಪಾಯಿ ಕಡಿಮೆ ಮಾಡಿ ಆದೇಶ ಮಾಡಿದೆ, ಇದು ರೈತರ ಆಕ್ರೋಶ ಕಾರಣವಾಗಿದೆ. ಎಮ್ಮೆ ಹಾಲಿಗೆ ಲೀಟರ್‌ಗೆ 43 ರೂ. ನೀಡಲಾಗುತ್ತಿತ್ತು. ಹಸುವಿನ ಹಾಲಿಗೆ 30.50 ರೂಪಾಯಿ ನೀಡಲಾಗುತ್ತಿತ್ತು. ಆದರೆ ಆರ್ಥಿಕ ನಷ್ಟ ಉಂಟಾಗಿದೆ ಎಂಬ ಕಾರಣ ನೀಡಿ 3.50 ರೂಪಾಯಿ ಕಟ್ ಮಾಡಿದೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka